ಸಂಪುಟ/Volume : 40
ಸಂಚಿಕೆ/Issue : 7
ಪುಟ/Pages : 12
ಬೆಲೆ/Price : ₹ 10/–

# ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ

ಏಪ್ರಿಲ್ 2018 ಮಾಸ ಪತ್ರಿಕೆ

Akhila Karnataka Shikshaka Samachara | April 2018 | Monthly

ದಾನಗಳಲ್ಲಿ ಮತದಾನವು ಅತಿಶ್ರೇಷ್ಠ

ಮತದಾನ ಮಾಡುವುದು ನಿಮ್ಮ ಹಕ್ಕು ಮತ್ತು ಕರ್ತವ್ಯ.

ಯೋಚಿಸಿ ಮತದಾನ ಮಾಡಿ.
ದೇಶಭಕ್ತರಿಗೆ, ಧರ್ಮನಿಷ್ಠರಿಗೆ,
ದೇಶದ ಅಭಿವೃದ್ಧಿಗಾಗಿ
ಕಂಕಣ ತೊಟ್ಟವರಿಗೆ ನಿಮ್ಮ ಮತ.




ನೈಜ ಶಿಕ್ಷಣ ಕೊಡಲು ಇನ್ನೆಷ್ಟು ದಿನ ? 3

ಭಾರತೀಯ ಭಾಷೆಗಳ ಸಂರಕ್ಷಣೆ ಮತ್ತು ಸಂವರ್ಧನೆ ಅಗತ್ಯ 7

A Journal of Karnataka State Secondary Teachers' Association

# ಸಂಪಾದಕೀಯ

## ಯಾರು ಹೊಣೆ?

ಬಿಸಿಲಿನ ತಾಪ ಏರಿಕೆಯಾಗುತ್ತಿದ್ದರೆ ಪರೀಕ್ಷಾ ತಾಪ ಕಡಿಮೆಯಾಗಿದೆ. ಆದರೆ ಪರೀಕ್ಷಾ ಸಮಯದಲ್ಲಿ ಆದ ಅನಾನುಕೂಲಗಳು ಹಾಗೂ ಪ್ರಮಾದಗಳು ವಿದ್ಯಾರ್ಥಿಗಳ ಹಾಗೂ ಪೋಷಕರ ಮನಸ್ಸಿನಲ್ಲಿ ಹಾಗೇ ಉಳಿದಿದೆ. ICSE, CBSE ಹಾಗೂ ರಾಜ್ಯಮಟ್ಟದ ಪರೀಕ್ಷೆಗಳೇ ಆಗಿರಲಿ ಮಕ್ಕಳ ನೋಂದಣಿ ಕಾರ್ಯ, ಹಾಲ್‌ಟಿಕೆಟ್ಟಿನಲ್ಲಿನ ವಿದ್ಯಾರ್ಥಿಗಳ ವಿವರದ ಮುದ್ರಣ, ಪ್ರಶ್ನೆಪತ್ರಿಕೆ ತಯಾರಿ ಹಾಗೂ ಮೌಲ್ಯಮಾಪನ, ಪ್ರತಿಯೊಂದರಲ್ಲೂ ಏನಾದರೊಂದು ವಿವಾದ ಅಥವಾ ಪ್ರಮಾದ ನಡೆದಿದೆ. ವಿದ್ಯಾರ್ಥಿಗಳು ಇಡೀ ವರ್ಷದ ಕಾಯಕಕ್ಕಾಗಿ ಪ್ರತಿಫಲ ಬಯಸುವ ಸಮಯ. ಈ ಸಮಯದಲ್ಲಿನ ದೊಡ್ಡವರ ತಪ್ಪುಗಳಿಂದ ವಿದ್ಯಾರ್ಥಿಗಳು ಅನುಭವಿಸುವ ನೋವು ಅಸಹನೀಯ. ಈ ಹಿಂದೆ ಪತ್ರಿಕೆಯಲ್ಲಿ ಓದಿದ ನೆನಪಿರಬಹುದು. ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಹೋದರೆ ಆ ಕೇಂದ್ರದಲ್ಲಿ ಆ ವಿದ್ಯಾರ್ಥಿಗಳ ನೋಂದಣಿ ಸಂಖ್ಯೆ ಇರಲೇ ಇಲ್ಲ. ಆ ವಿದ್ಯಾರ್ಥಿಗಳ ಗತಿಯೇನು? ಈ ವಿಷಯ ಒಂದು ಕಡೆ ಆದರೆ ಪ್ರಶ್ನೆಪತ್ರಿಕೆ ತಯಾರಿಕೆಗೆ ಬಹಳ ಮುಂಚಿನ ದಿನಗಳಿಂದಲೂ ತಯಾರಿ ನಡೆದು, ನುರಿತ ಶಿಕ್ಷಕರ ಬಳಕೆಯಾಗಿ, ನುರಿತ ಮುದ್ರಣಗಾರರ ಬಳಿಯೇ ಮುದ್ರಣಗೊಂಡರೂ ಪ್ರಶ್ನೆಪತ್ರಿಕೆಯಲ್ಲಿ ದೋಷವಿರುತ್ತದೆಯೆಂದರೆ ಲಕ್ಷಾನುಲಕ್ಷ ವಿದ್ಯಾರ್ಥಿಗಳ ಜೀವನದ ಜೊತೆ ಚೆಲ್ಲಾಟವೆನ್ನಬೇಕೋ, ತಮ್ಮ ಕೆಲಸದ ಬಗ್ಗೆ ನಿರ್ಲಕ್ಷ್ಯ ವೆನ್ನಬೇಕೋ ತಿಳಿಯದು. ಪ್ರಶ್ನೆಪತ್ರಿಕೆಯ ಪ್ರೂಫ್ ರೀಡಿಂಗ್ ನಡೆಯುವುದಿಲ್ಲವೇ? ನಡೆದರೂ ನುರಿತ ಶಿಕ್ಷಕರಿಂದ ನಡೆಯುವುದಿಲ್ಲವೇ? ಇಷ್ಟಾದರೂ ಇಂತಹ ಅತಿ ಮುಖ್ಯ ವಿಷಯಗಳಲ್ಲಿ ಪ್ರಮಾದಗಳು ಆಗುವುದಾದರೂ ಎಲ್ಲಿ? ಇದಕ್ಕೆ ಹೊಣೆಯಾಗುವವರು ಯಾರು? ಪ್ರಶ್ನೆಪತ್ರಿಕೆಯಲ್ಲಿನ ತಪ್ಪು ಪ್ರಶ್ನೆಯನ್ನು ನೋಡಿ ಪರೀಕ್ಷಾ ಸಮಯದಲ್ಲಿ ವಿದ್ಯಾರ್ಥಿಗಳ ಮನಸ್ಸಿನಲ್ಲಾಗುವ ತುಮುಲ ಎಂತಹುದು? ಎಂಬುದರ ಅರಿವಾದರೂ ಇದೆಯೇ? ಅನೇಕ ವಿದ್ಯಾರ್ಥಿಗಳು ತಪ್ಪಾಗಿ ಮುದ್ರಿತವಾದ ಪ್ರಶ್ನೆಯನ್ನು ನೋಡಿ ಆ ಪ್ರಶ್ನೆಗೆ ಉತ್ತರಿಸಲು ಪ್ರಯತ್ನಿಸದೇ ಹೋದರೆ, ಆಗುವ ಅನ್ಯಾಯಕ್ಕೆ ಹೊಣೆ ಯಾರು? ಇನ್ನು ಪ್ರಶ್ನೆಪತ್ರಿಕೆ ತಯಾರಿಕೆಯಲ್ಲಿ ಪ್ರಶ್ನೆಪತ್ರಿಕೆ ತಯಾರಿಕಾ ಸಮಯದಲ್ಲಿ ಶಿಕ್ಷಕರು ತೋರುವ ಅತಿ ಜಾಣತನ! ಪ್ರಶ್ನೆಪತ್ರಿಕೆಯನ್ನು ಶಿಕ್ಷಕರಿಗಾಗಿ ತಯಾರಿಸುತ್ತಾರೋ ಅಥವಾ ವಿದ್ಯಾರ್ಥಿಗಳಿಗೋ ತಿಳಿಯದು. ಇಂತಿಷ್ಟೇ ಶೇಕಡಾ ಅಂಕಗಳನ್ನು ಸರಳ, ಕಠಿಣ ಪ್ರಶ್ನೆಗಳಿಗೆ ಮೀಸಲಾಗಿದ್ದರೂ, ಅತಿ ಕಠಿಣ ಪ್ರಶ್ನೆಗಳನ್ನು ನೀಡುವುದು ಇವರ ಜಾಣತನ ತೋರಿಸಲೋ ಅಥವಾ ವಿದ್ಯಾರ್ಥಿಗಳ ದಡ್ಡತನವನ್ನು ಪ್ರದರ್ಶಿಸಲೋ ತಿಳಿಯುತ್ತಿಲ್ಲ. ಇನ್ನು ಪ್ರಶ್ನೆಪತ್ರಿಕೆಗಳ ಸೋರಿಕೆ. ಈ ಸೋರಿಕೆ ಗೊಂದಲಕ್ಕೆ ಉತ್ತರ ಹುಡುಕುವುದು ಎಲ್ಲಿ, ಎಂದು ಹುಡುಕುವುದೇ ಒಂದು ಗೊಂದಲ. ಪ್ರಶ್ನೆಪತ್ರಿಕೆ ಸೋರಿಕೆಗೆ ಪಾಲುದಾರ ರಾಗಿರಬಹುದೆಂದು ಊಹಿಸುಲಾಗುವ ಶಿಕ್ಷಣ ಇಲಾಖೆಯ ಅಧಿಕಾರಿಗಳೇ, ಶಿಕ್ಷಕರೇ ಅಥವಾ ವಿದ್ಯಾರ್ಥಿಗಳೇ? ಅಥವಾ ಈಗಿನ ಸಾಮಾಜಿಕ ಜಾಲತಾಣವೇ? ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಬಯಸುವ ಸಮಾಜದ ಜನರೇ? ಎಲ್ಲೋ ಒಂದು ಕಡೆ ಪ್ರಶ್ನೆಪತ್ರಿಕೆ ಸೋರಿಕೆಯಾದರೆ, ಎಲ್ಲಾ ಕಡೆ ಪರೀಕ್ಷೆ ಮಾಡುವುದು ಎಷ್ಟರ ಮಟ್ಟಿಗೆ ಸರಿ? ವಿದ್ಯಾರ್ಥಿಗಳು ಒಂದು ಬಾರಿ ತಯಾರಿ ನಡೆಸಿ ಪರೀಕ್ಷೆ ಬರೆಯುವುದೇ ಕಷ್ಟವಾಗಿರುವಾಗ, ಮತ್ತೆ ಮತ್ತೆ ಅವರ ಮೇಲೆ ಒತ್ತಡ ಹಾಕುವುದು ಎಷ್ಟರ ಮಟ್ಟಿಗೆ ಸರಿ? ಪರೀಕ್ಷಾ ಸಮಯದ ತೊಂದರೆಗಳು ಇಷ್ಟಾದರೆ, ಮೌಲ್ಯಮಾಪನದ ಕಥೆಯೇ ಬೇರೆ. ತಮ್ಮ ಬೇಡಿಕೆಗಳನ್ನೇ ಮುಂದಿಟ್ಟುಕೊಂಡು ಮೌಲ್ಯಮಾಪನದ ಕಾರ್ಯವನ್ನು ಬಹಿಷ್ಕರಿಸುತ್ತೇವೆ ಎನ್ನುವ ಶಿಕ್ಷಕರ ಜವಾಬ್ದಾರಿ ಎಂತಹುದು?

ಈ ಮೇಲಿನ ಎಲ್ಲಾ ಪ್ರಶ್ನೆಗಳನ್ನು ಗಮನಿಸಿದಾಗ ಶಿಕ್ಷಣ ತ್ರಿಕೋನದ ಮೂರು ಬಿಂದುಗಳಾದ ವಿದ್ಯಾರ್ಥಿ, ಶಿಕ್ಷಕ ಮತ್ತು ಸಮಾಜ ಎಲ್ಲವೂ ಒಂದಲ್ಲಾ ಒಂದು ಕಡೆ ಜವಾಬ್ದಾರಿ ತೆಗೆದುಕೊಂಡು ಮುಂದಿನ ಬಾರಿಯಾದರೂ ಈ ಎಲ್ಲಾ ಸಮಸ್ಯೆಗಳಿಂದ ಹೊರಬರುವ ನಿರೀಕ್ಷೆ ಮಾಡಬಹುದೇ?

ಸಂಪಾದಕ

## ಸೂಕ್ತಿ



ನೆಲವೊಂದೆ, ಹೊಲಗೇರಿ ಶಿವಾಲಯಕೆ
ಜಲವೊಂದೆ ಶೌಚಾಚಮನಕೆ
ಕುಲವೊಂದೆ ತನ್ನ ತಾನರಿದವಂಗೆ
ಫಲವೊಂದೆ ಷಡುದರುಶನ ಮುಕ್ತಿಗೆ
ನಿಲವೊಂದೆ ಕೂಡಲಸಂಗಮದೇವಾ
ನಿಮ್ಮನರಿದವಂಗೆ.

- ಬಸವಣ್ಣ

## ಪರಿವಿಡಿ


- ನೈಜ ಶಿಕ್ಷಣ ಕೊಡಲು ಇನ್ನೆಷ್ಟು ದಿನ ? — 3
- ಮತದಾರ 'ಜಾಗೃತ'ನಾದರೆ ಪ್ರಜಾಪ್ರಭುತ್ವ ತೂಕಡಿಸದು — 4
- ರಾಜ್ಯ ಕಾರ್ಯಕಾರಿಣಿ ಸಭೆ — 6
- ಭಾರತೀಯ ಭಾಷೆಗಳ ಸಂರಕ್ಷಣೆ ಮತ್ತು ಸಂವರ್ಧನೆ ಅಗತ್ಯ — 7
- ಸ್ತ್ರೀ ಶಕ್ತಿಯ ಸಂಕೇತ ಇಂದಿರಾ ದೇಶಪಾಂಡೆ — 8
- ಯುಗಾದಿ ಹೊಸವರ್ಷದ ಪಾಕೆಟ್ ಕ್ಯಾಲೆಂಡರ್ ಬಿಡುಗಡೆ — 10
- ಗುರುಕುಲಕ್ಕೆ 24 — 11
- ಚಿತ್ರಸುದ್ದಿ — 12

# ನೈಜ ಶಿಕ್ಷಣ ಕೊಡಲು ಇನ್ನೆಷ್ಟು ದಿನ ?

**ಶ್ರೀಮತಿ ಡಿ.ಕೆ. ಮಮತಾ**
**ಮಹಿಳಾ ವಿಭಾಗದ ಸಹ ಕಾರ್ಯದರ್ಶಿ**
**ಎ.ಬಿ.ಆರ್.ಎಸ್.ಎಂ.**



ಸಮಾಜವೆಂಬುದು ಒಂದು ಮನೆಯಾದರೆ ಶಿಕ್ಷಣವೆಂಬುದು ಆ ಮನೆಯ ತಳಪಾಯವಿದ್ದಂತೆ. ಯಾವುದೇ ಒಂದು ಮನೆ ಬಹಳ ವರ್ಷಗಳ ಕಾಲ ಗಟ್ಟಿಯಾಗಿರಬೇಕೆಂದರೆ ಆ ಮನೆಯ ತಳಪಾಯ ಭದ್ರವಾಗಿರಬೇಕು. ಹಾಗೆಯೇ ಸಮಾಜವೆಂಬ ಮನೆ ಭದ್ರವಾಗಿರ ಬೇಕೆಂದರೆ ಶಿಕ್ಷಣವೆಂಬ ತಳಪಾಯ ಭದ್ರವಾಗಿರಬೇಕು. ಆ ಭದ್ರವಾದ ತಳಪಾಯಕ್ಕೆ ಅವಶ್ಯಕವಾದ ಸದೃಢ ವಸ್ತುಗಳನ್ನು ಬಳಸಿದರೆ ಮಾತ್ರ ಭದ್ರವಾದ ತಳಪಾಯ ಹಾಕಿ ಸುಭದ್ರವಾದ ಮನೆಯನ್ನು ಕಟ್ಟಬಹುದು. ಶಿಕ್ಷಣವೆಂಬ ತಳಪಾಯಕ್ಕೆ ಸದೃಢ ಅಂಶಗಳೆಂದರೆ 1. ಸತ್ವದಿಂದ ಕೂಡಿದ, ನೈತಿಕತೆ, ರಾಷ್ಟ್ರೀಯತೆಯನ್ನು ಬೆಳೆಸಬಲ್ಲ ಪಠ್ಯಕ್ರಮ 2. ನುರಿತ ಸನ್ಮಾರ್ಗದಲ್ಲಿ ತಾನೂ ನಡೆದು ವಿದ್ಯಾರ್ಥಿಗಳಿಗೆ ಮಾರ್ಗದರ್ಶಕ ನಾಗಬಲ್ಲ ಶಿಕ್ಷಕ, 3. ಉತ್ತಮ ಕಟ್ಟಡ, 4. ಜಾತೀಯತೆಯಿಂದ ದೂರವಿರುವ ಉತ್ತಮ ವಾತಾವರಣ.

ಇತ್ತೀಚಿನ ದಿನಗಳಲ್ಲಿ ಶಿಕ್ಷಣವೆಂಬ ಕ್ಷೇತ್ರದಲ್ಲಿ ಈ ಮೇಲೆ ಸೂಚಿಸಿರುವ ಎಲ್ಲಾ ವಿಷಯಗಳು ಮರೀಚಿಕೆಯಾಗುತ್ತೀವೆಯೇನೋ ಎಂಬ ಆತಂಕ ಪ್ರತಿಯೊಬ್ಬರಲ್ಲೂ ಕಾಡುತ್ತಿದೆಯೆಂದರೆ ಅತಿಶಯೋಕ್ತಿ ಯಾಗಲಾರದು. ವಿದ್ಯಾರ್ಥಿಗಳಿಗೆ ಬೋಧಿಸುವ ವಿಷಯವನ್ನು ಶಿಕ್ಷಣಕ್ಷೇತ್ರದಿಂದ ದೂರವಿರುವ ಯಾವುದೇ ವ್ಯಕ್ತಿಗಳು ನಿರ್ಮಾಣ ಮಾಡಿದರೂ ಕುರುಡನೊಬ್ಬನು ನೇತ್ರವಂತನಿಗೆ ದಾರಿ ತೋರಿಸಿ ದಂತಾಗಬಹುದು. ಸಮಾಜಕ್ಕೆ ಅವಶ್ಯಕವಿರುವ ಸುಪ್ರಜೆಯನ್ನು ನಿರ್ಮಾಣ ಮಾಡುವಂತಹ ಶಕ್ತಿಯಿರುವುದು ಪಠ್ಯವಸ್ತುವಿಗೆ. ಹಾಗೂ ಇಂತಹ ಪಠ್ಯವಸ್ತುವಿನ ಆಧಾರದ ಮೇಲೆ ರಚಿತವಾದ ಪಠ್ಯ ಪುಸ್ತಕಕ್ಕೆ. ಪುಸ್ತಕಗಳಲ್ಲಿ ಸುಳ್ಳಿನ ಸರಮಾಲೆಯನ್ನು ಪೋಣಿಸಿದರೆ ಬೋಧಿಸುವ ಶಿಕ್ಷಕ ಹೇಗೆ ತಾನೆ ಒಳ್ಳೆಯ ಪ್ರಜೆಯನ್ನು ಸೃಷ್ಟಿಸಬಲ್ಲ? ಪಠ್ಯಪುಸ್ತಕ ರಚಿಸುವವರು ತಮ್ಮ ಅತಿ ಬುದ್ಧಿಶಕ್ತಿಯನ್ನು ತೋರಿಸದೇ ವಿದ್ಯಾರ್ಥಿಗಳ ವಯೋಮಾನ, ಬುದ್ದಿಶಕ್ತಿ, ಆ ವಯಸ್ಸಿಗೆ ತಕ್ಕಂತೆ ಅವರಿಗೆ ತಿಳಿಸಬೇಕಾದ ವಿಷಯವನ್ನು ಮಾತ್ರ ಪಠ್ಯಪುಸ್ತಕದಲ್ಲಿರಿಸಿದರೆ ಬೋಧಿಸುವ ಶಿಕ್ಷಕರಿಗೆ ಇರಿಸು ಮುರುಸಾಗದು. ಇಡೀ ವಿಶ್ವದಲ್ಲಿ ದೇಶವನ್ನು ಮಾತೆಯೆಂದು ಹೇಳುವ ದೇಶ ಭಾರತವನ್ನು ಬಿಟ್ಟರೆ ಬೇರೊಂದಿರಲಾರದು. ಕಳೆದ ವರ್ಷದ ಪಠ್ಯಪುಸ್ತಕ ಪರಿಷ್ಕರಣೆಯಲ್ಲಿ ಜನ್ಮವೆತ್ತಿರುವಂತಹ ಸ್ಥಳಕ್ಕೆ ಮಾತೃಭೂಮಿ ಎನ್ನುವ ಸಂಸ್ಕಾರಕ್ಕೆ ಎಳ್ಳು ನೀರು ಬಿಟ್ಟರು. ಇದಕ್ಕೆ ಯಾರು ಹೊಣೆ? “ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ” ಎಂದು ರಾಮಾಯಣದಲ್ಲಿ ಬರುವ ಶ್ರೀರಾಮನ ಮಾತು, ಅಂದರೆ ‘ತಾಯಿ ಮತ್ತು ತಾಯ್ನಾಡು ಸ್ವರ್ಗಕ್ಕಿಂತಲೂ ಮಿಗಿಲು’. ಇಂತಹ ವಿಷಯದಲ್ಲೂ ವಿಷವನ್ನು ಬಿತ್ತುವ ಕೆಲಸವನ್ನು ಪಠ್ಯಪುಸ್ತಕಗಳಲ್ಲಿ ಮಾಡುವುದು ಘೋರ ಅಪರಾಧ. ಪಠ್ಯಪುಸ್ತಕಗಳಲ್ಲಿ ಸುಳ್ಳು ಪೊಳ್ಳುಗಳನ್ನು ಜೋಡಿಸುವುದು ಸುಲಭದ ಕೆಲಸವಾಗಬಹುದು ಆದರೆ ಅದೇ ಪಠ್ಯವನ್ನು ವಿದ್ಯಾರ್ಥಿಗಳಿಗೆ ಬೋಧಿಸಲು ಆಗದೇ, ಪರೀಕ್ಷಾ ದೃಷ್ಟಿಯಿಂದ ಬೋಧಿಸಲೇಬೇಕಾದ ಸಂದರ್ಭವನ್ನು ನಾವು ಬಿಸಿ ತುಪ್ಪವನ್ನು ಉಗುಳಲೂ ಆಗದೇ ನುಂಗಲು ಆಗದೇ ಇರುವಂತಹ ಸನ್ನಿವೇಶಕ್ಕೆ ಹೋಲಿಸಬಹುದು.

ಇನ್ನು **‘ವಸುದೈವ ಕುಟುಂಬಕಂ’** ಎಂದು ಸಾರಬೇಕಾದ ಶಿಕ್ಷಕರೇ ತರಗತಿಯಲ್ಲಿ ನಿನ್ನ ಜಾತಿ ಯಾವುದು? ಸರಕಾರದಿಂದ ಕೆಲವು ಸೌಲಭ್ಯಗಳು ಸಿಗಲು ಕೆಲವೊಂದು ಜಾತಿಯವರು ಮಾತ್ರ ಅರ್ಹರು ಎಂದು ಹೇಳುವುದಾದರೂ ಹೇಗೆ? ಮಗುವಿನ ಮನಸ್ಸಿನಲ್ಲಿ ಜಾತಿ ಬೇಧಭಾವವನ್ನು ಬಿತ್ತುವುದಾದರೂ ಹೇಗೆ? ಕೆಲವೊಬ್ಬರಿಗೆ ಸಿಗುವ ಸೌಲಭ್ಯವನ್ನು ಇನ್ನೊಂದು ಮಗು ನೋಡಿಕೊಂಡು ಕೂಡುವುದಾದರೂ ಹೇಗೆ ?

ಬಡತನದಲ್ಲಿರುವ ಮಗುವೂ ಸಹ ಶ್ರೀಮಂತರ ಮಕ್ಕಳಂತೆ ಖಾಸಗಿಶಾಲೆಯಲ್ಲಿ ಓದಬೇಕಂಬ ಆಶಯವೇನೋ ಸರಿ. ಮಗುವಿಗೆ ಖಾಸಗಿ ಶಾಲೆಯಲ್ಲಿ ಸರಕಾರದ ಕಡೆಯಿಂದ ಸೀಟ್ ಕೊಡಿಸುವುದು ಸರಿ. ಆದರೆ ಸೀಟ್ ಕೊಡಿಸುವುದರಿಂದ ಆ ಮಗು ಶ್ರೀಮಂತರ ಮಕ್ಕಳಿಗೆ ಸರಿಸಮಾನವಾಗಿ ಶಿಕ್ಷಣ ಪಡೆಯಲು ಸಾಧ್ಯವೇ? ಬಡತಂದೆ–ತಾಯಂದಿರು ಶ್ರೀಮಂತರ ಮಕ್ಕಳಿಗೆ ಸರಿಸಮಾನವಾಗಿ ಇನ್ನಿತರ ಅವಶ್ಯಕತೆಗಳನ್ನು ನೀಡಲು ಸಾಧ್ಯವೇ? ನೀಡದಿದ್ದರೆ ಆ ಮಗು ಬಡವನೆಂಬ ಕೀಳರಿಮೆಯನ್ನು ಅನುಭವಿಸಲಾರದೇ? ಬಡವರ ಮಕ್ಕಳಿಗೆ ಮಾತ್ರ ಈ ಸೌಲಭ್ಯ ದೊರಕುತ್ತಿದೆಯೇ ಎಂಬುದೇ ಅನುಮಾನವಾಗಿದೆ.

ಎಷ್ಟೋ ಶಾಲೆಗಳು ಬಿದ್ದು ಹೋಗುವ ಸ್ಥಿತಿಯಲ್ಲಿದ್ದರೂ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಜೀವವನ್ನು ಕೈಯಲ್ಲಿಡಿದುಕೊಂಡು ಒಂದು ಗಮನ ಪಾಠದ ಕಡೆ ಮತ್ತು ಇನ್ನೊಂದು ಗಮನ ಬಿದ್ದು ಹೋಗುವ ಸ್ಥಿತಿಯಲ್ಲಿರುವ ಗೋಡೆಯ ಕಡೆಯಿಟ್ಟುಕೊಂಡಿರುವುದು ಸಹಜ ಸಾಮಾನ್ಯವಾಗಿದೆ. ಬೋಧಿಸುವ ಶಿಕ್ಷಕ ಹಾಗೂ ಕಲಿಯುವ ವಿದ್ಯಾರ್ಥಿಗಳಿಬ್ಬರ ಮನಸ್ಥಿತಿ ಸಹಜವಾಗಿ ಶಾಂತಿಯುತವಾಗಿದ್ದರೆ ಮಾತ್ರ ಬೋಧನಾ ಕಾರ್ಯ ಸಫಲಗೊಳ್ಳಲು ಸಾಧ್ಯ.

ಇನ್ನು ವರ್ಷಕ್ಕೊಂದರಂತೆ ಬದಲಾವಣೆ ಶಿಕ್ಷಣ ಕ್ಷೇತ್ರದಲ್ಲಿ ಸರ್ವೇಸಾಮಾನ್ಯವಾಗಿಬಿಟ್ಟಿದೆ. ಶಿಕ್ಷಕ ಹಾಗೂ ವಿದ್ಯಾರ್ಥಿಗಳಿನ್ನು ಒಂದು ವ್ಯವಸ್ಥೆಗೆ ಹೊಂದಿಕೊಳ್ಳಲು ಪ್ರಯತ್ನಿಸುತ್ತಿರುವಾಗಲೇ ಬೇರೊಂದು ಬದಲಾವಣೆಯಾಗಿಬಿಡುತ್ತದೆ. ಕೆಲವೊಮ್ಮೆ ಶಿಕ್ಷಕರೇ ಗೊಂದಲ ಕ್ಕೊಳಗಾಗುವ ಸ್ಥಿತಿ ಬಂದುಬಿಡುತ್ತದೆ. ಸೆಮಿಸ್ಟರ್, ನಾನ್ ಸೆಮಿಸ್ಟರ್, ತ್ರೈಮಾಸಿಕ ಪದ್ಧತಿ, ಪಠ್ಯಪುಸ್ತಕ ಬದಲಾವಣೆ, ಪ್ರಾಥಮಿಕ, ಮಾಧ್ಯಮಿಕ ಹಾಗೂ ಪಿ.ಯು ವಿಭಾಗಗಳ ಜೋಡಣೆ, ವಿಭಜನೆ ಒಂದೇ ಎರಡೇ. ಶಿಕ್ಷಣ ಕ್ಷೇತ್ರದಲ್ಲಿರುವ ಶಿಕ್ಷಕರಿಗೇ ಮುಂದಿನ ಬದಲಾವಣೆ ಏನೆಂದು ಗೊತ್ತಿರುವುದಿಲ್ಲ, ಆಗಲೇ ಬದಲಾವಣೆಯಾಗಿರುತ್ತವೆ. ಆ ಬದಲಾವಣೆಗಳನ್ನು ಅರ್ಥಮಾಡಿಕೊಳ್ಳುವಲ್ಲಿಯೇ ಒಬ್ಬ ಶಿಕ್ಷಕನ ಶೈಕ್ಷಣಿಕ ವರ್ಷ ಕಳೆದುಹೋಗುತ್ತದೆ.

ಶಿಕ್ಷಣ ಕ್ಷೇತ್ರವೆಂಬುದು ತಿಳಿ ನೀರಾಗಿರಬೇಕೇ ಹೊರತು, ಕೊಳಕು ಗಳಿಂದ ಕದಡಿದ ಮಲೀನ ನೀರಾಗಬಾರದೆಂಬುದೇ ಅತಿ ಆಸಕ್ತಿಯಿಂದ ನೂತನ, ನವ್ಯ, ದೇಶಪ್ರೇಮಭರಿತ ಸಮಾಜ ಕಟ್ಟಲು ಹೊರಟಿರುವ ಶಿಕ್ಷಕರ ಆಸೆ. ಈ ಆಸೆಯನ್ನು ಮುಂದಿನ ಸರ್ಕಾರವಾದರೂ ಪೂರೈಸಲಿ ಎಂಬುದೇ ನಮ್ಮೆಲ್ಲಾ ಶಿಕ್ಷಕರ ಆಶಯ. ●

# ಮತದಾರ 'ಜಾಗೃತ'ನಾದರೆ ಪ್ರಜಾಪ್ರಭುತ್ವ ತೂಕಡಿಸದು



**ಶ್ರೀ ರಾಜೇಶ್ ಪದ್ಮಾರ್**
**ಬೆಂಗಳೂರು**

ಮತ್ತೊಂದು ಚುನಾವಣೆಗೆ ಕರ್ನಾಟಕ ಸಜ್ಜಾಗಿದೆ. 'ಮತ' ಎನ್ನುವುದು ಪ್ರತಿಯೊಬ್ಬನ ಕೈಯಲ್ಲಿನ 'ಅಸ್ತ್ರ'. ಅದನ್ನು ಮಾರಿಕೊಳ್ಳಬಾರದೆಂದು ಎಲ್ಲರಿಗೂ ಮನವರಿಕೆ ಮಾಡಿಕೊಡಬೇಕಾದುದು ಎಲ್ಲ ಪ್ರಜ್ಞಾವಂತರ ಹಾಗೂ ಮಾಧ್ಯಮಗಳ ಕರ್ತವ್ಯ. ಅದರ ಜೊತೆಜೊತೆಗೇ ಇರುವ ಮತ್ತೊಂದು ಕೆಲಸವೆಂದರೆ, ತಪ್ಪದೆ ಮತಚಲಾಯಿಸುವುದು. ಮತವನ್ನು ಚಲಾಯಿಸಲು ಮತಗಟ್ಟೆಗೇ ಹೋಗದವನು ಚುನಾವಣೆಯ ನಂತರ ರಾಜಕಾರಣಿಗಳನ್ನು ಪ್ರಶ್ನಿಸುವ ಸ್ವಾತಂತ್ರ್ಯವನ್ನೇ ಕಳೆದುಕೊಂಡುಬಿಡುತ್ತಾನೆ. ಮತ್ತು ಏನಾದರೂ, ಕೆಟ್ಟ ಅಭ್ಯರ್ಥಿ ಚುನಾಯಿತನಾದಲ್ಲಿ ಅದಕ್ಕೇ ಮತ ಚಲಾಯಿಸದ ಈ ವ್ಯಕ್ತಿಯೇ ಪ್ರಮುಖ ಕಾರಣನಾಗುತ್ತಾನೆ. ಹೀಗಾಗಿ, ಚುನಾವಣೆಯ ದಿನದಂದು ಮತಗಟ್ಟೆಗೆ ಬಂದು ಮತ ಚಲಾಯಿಸುವಂತೆ ಪ್ರತಿಯೊಬ್ಬರನ್ನೂ ಆಗ್ರಹಿಸಬೇಕು.

ರಾಜ್ಯ ರಾಜಕೀಯ ರಣಾಂಗಣದ ಕಾವು ದಿನೇ ದಿನೇ ಏರುತ್ತಿದೆ. ಸ್ಪರ್ಧೆಗೆ ನಿಂತ ಅಭ್ಯರ್ಥಿಗಳೆಲ್ಲರಿಗೂ ಗೆಲ್ಲುವ ಆಕಾಂಕ್ಷೆ. ಗೆಲುವು ಮಾತ್ರ ಧ್ಯೇಯ. ಅದಕ್ಕಾಗಿ ಯಾವ ಮಾರ್ಗಕ್ಕೂ ಹೋಗಲು ತಯಾರು. ರಾಜಕೀಯ ಪಕ್ಷಗಳ ಗುರಿ ಕೇವಲ ಚುನಾವಣೆಯನ್ನು ಅದ್ದೂರಿಯಾಗಿ ಎದುರುಗೊಂಡು ಗೆದ್ದು ಬರುವುದೇ ಮಾತ್ರವೇನೋ ಎಂದೆನಿಸಿದರೆ ಅದು ತಪ್ಪಲ್ಲ. ಯಾಕೆಂದರೆ ಗೆದ್ದು ಅಧಿಕಾರದ ಚುಕ್ಕಾಣಿ ಹಿಡಿಯುವುದು ಯಾವುದೇ ರಾಜಕೀಯ ಪಕ್ಷದ ಪರಮ ಗುರಿ. ಅಧಿಕಾರ ಕೈಲಿದ್ದಾಗ ಮಾತ್ರವೇ ಅಭಿವೃದ್ಧಿಯ ಕನಸನ್ನು ಸುಲಭವಾಗಿ ನೆರವೇರಿಸಬಹುದು. ಅಧಿಕಾರವಿದ್ದರೆ ಆಡಳಿತ ಯಂತ್ರ ಕೈಯಲ್ಲಿರುತ್ತದೆ ಹಾಗೂ ತಮ್ಮ ಕಲ್ಪನೆಯನ್ನು ಸಾಕಾರಗೊಳಿಸಬಹುದು. ಈ ಪೈಕಿ ಪ್ರಾಮಾಣಿಕ ಆಡಳಿತ ಎಷ್ಟರ ಮಟ್ಟಿಗೆ ಸಾಧ್ಯ ಎಂಬುದು ಎರಡನೇ ವಿಚಾರ. ಒಟ್ಟಿನಲ್ಲಿ ಸಿಂಹಾಸನಕ್ಕಾಗಿನ ಈ ಹೋರಾಟಕ್ಕೆ ತೀವ್ರ ಪ್ರಯತ್ನ ಈಗಾಗಲೇ ಪ್ರಾರಂಭವಾಗಿದ್ದು 'ಯಶಸ್ಸಿನ ಮಂತ್ರ' ಎಲ್ಲೆಡೆಯಿಂದ ಜಪಿಸಲ್ಪಡುತ್ತಿದೆ. ಪ್ರಜ್ಞಾವಂತ ಮತದಾರನ ಮೇಲೆಯೇ ಎಲ್ಲವೂ ಕೊನೆಗೆ ಅವಲಂಬಿತ.

ಪ್ರಣಾಳಿಕೆಗಳು ಮೊಣಕೈಗೆ ಸವರಿದ ಬೆಲ್ಲದಂತೆ, ಚುನಾವಣೆ ಗೆದ್ದರೆ ಏನು ಮಾಡುತ್ತೇವೆ? ನಿಮಗೇನಲ್ಲಾ ಹೊಸ ವ್ಯವಸ್ಥೆಗಳು, ಹೊಸ ಯೋಜನೆಗಳು ಕಾದಿವೆ? ಎಂದು ರಾಜಕೀಯ ಪಕ್ಷಗಳ ಪ್ರಣಾಳಿಕೆಗಳು!. ಅನೇಕ ಬಾರಿ ಈ ಪ್ರಣಾಳಿಕೆಗಳಲ್ಲಿನ ಆಶ್ವಾಸನೆಗಳು ಕೇಳಲು-ಕಾಣಲು ಸವಿಯಾಗೇ ಇರುತ್ತವೆ. ಹತ್ತಾರು ಎದ್ದು ಕಾಣುವ ಪೊಳ್ಳು ಭರವಸೆಗಳೊಂದಿಗೆ ಪ್ರಮುಖ ರಾಜಕೀಯ ಪಕ್ಷಗಳು ಮತದಾರರಿಗೆ ಜಾದೂ ಮಾಡಹೊರಟಿವೆ. ಪಕ್ಷಗಳ ಪರಸ್ಪರ ಪೈಪೋಟಿ ಎಷ್ಟರಮಟ್ಟಿಗೆ ಇವೆಯೆಂದರೆ ಭರವಸೆ ಕೊಡುವುದರಲ್ಲೂ ನಿಸ್ಸೀಮರಾಗಿ ನಾಮುಂದು ತಾಮುಂದು ಎಂಬ ಸ್ಪರ್ಧೆಗೆ ಇಳಿದು ಬಿಡುತ್ತಾರೆ.

ಈ ಹಿಂದಿನ ಚುನಾವಣೆಗಳಲ್ಲಿ ರಾಜ್ಯದ ಮೂರು ವಿಭಿನ್ನ, ಪ್ರಮುಖ ರಾಜಕೀಯ ಪಕ್ಷಗಳು ಅಧಿಕಾರದ ರುಚಿ ಕಂಡಿದ್ದವು. ಸ್ವಲ್ಪ ಸಮಯ ವಿರೋಧ ಪಕ್ಷದಲ್ಲೂ ಕಾಲಹರಣ ಮಾಡಿದ್ದವು. ಕಳೆದ ಚುನಾವಣೆಯಲ್ಲಿ ಅಭಿವೃದ್ಧಿಯ ಮಂತ್ರ ಎಷ್ಟರ ಮಟ್ಟಿಗೆ ಪ್ರಾಯೋಗಿಕವಾಯಿತು ಎಂಬುದನ್ನು ಮತ್ತೆ ನಾವು ವಿಮರ್ಶೆ ಮಾಡಿಕೊಳ್ಳಬೇಕಾಗಿದೆ.

ಚುನಾವಣೆಗೆ ಪೂರ್ತಿ ಕಡುವೈರಿಗಳಂತೆ ಪರಸ್ಪರ ಆರೋಪ – ಪ್ರತ್ಯಾರೋಪಗಳಲ್ಲಿ ತೊಡಗಿದ ಯಾವ ಪಕ್ಷವೂ, ನಂತರದ ಸರ್ಕಾರ ರಚನೆಯ ಸಂದರ್ಭದಲ್ಲಿ ಅಗತ್ಯ ಬಿದ್ದರೆ ಮಿತ್ರತ್ವ ಸ್ಥಾಪಿಸಲು ಹಿಂದು-ಮುಂದೆ ನೋಡುವುದಿಲ್ಲ. ಕಡುವೈರಿಯೇ ಆಪ್ತಮಿತ್ರನಾಗುವ ಪ್ರಹಸನ ಇಲ್ಲಿ ಸಾಮಾನ್ಯ ಈ ಮಿತ್ರತ್ವವು ಅಧಿಕಾರದ ಅವಧಿಯಲ್ಲಿ ಅನೇಕ ಗೊಂದಲವನ್ನು ಸೃಷ್ಟಿಸಿ ಅಭಿವೃದ್ಧಿಯ ಚಿಂತನೆಯಿಂದ ಸಾಕಷ್ಟು ದೂರ ಸರಿದದ್ದೂ ಇದೆ. ಒಳ್ಳೆಯದು ಮಾಡಿದಾಗ ತಾನು ಮಾತ್ರ ಎಂದು ಮಿತ್ರ ಪಕ್ಷವನ್ನು ಬದಿಗಿರಿಸುವುದು ಅವರ ಅಸ್ತಿತ್ವದ ದೃಷ್ಟಿಯಿಂದ ಅನಿವಾರ್ಯ !

ಎಲ್ಲ ಕಾಲಕ್ಕೂ ಚುನಾವಣೆ ಪ್ರಜಾಪ್ರಭುತ್ವದ ಜೀವನಾಡಿ ಎಂಬ ವ್ಯಾಖ್ಯೆ ಅನ್ವಯಿಸುತ್ತದೆ. ಪ್ರಜಾಪ್ರಭುತ್ವದ ಮೂಲ ಉದ್ದೇಶವೇ ಜನಪ್ರತಿನಿಧಿಗಳ ಆಯ್ಕೆಯ ಅವಕಾಶ ಸಾಮಾನ್ಯ ಪ್ರಜೆಗೆ ನೀಡುವಂತದ್ದು. ಅನೇಕ ಬಾರಿ ಈ ಆಯ್ಕೆಯಲ್ಲೇ ನಾವು ಎಡವುತ್ತೇವೆ. ಪಕ್ಷಗಳು ಸಿದ್ಧಾಂತ-ವಿಚಾರಗಳನ್ನು ಬದಿಗಿರಿಸಿ ಉದ್ಯಮಿಗಳಿಗೆ, ಅನುಭವ ಇಲ್ಲದ ಇತರರಿಗೆ ಮಣೆ ಹಾಕುವುದರಿಂದ ಮತದಾರನ ಮುಂದಿರುವ ಆಯ್ಕೆಯ ಅವಕಾಶ ಮತ್ತೆ ಗೊಂದಲದ ಗೂಡಾಗುತ್ತದೆ. ಇದೇ ನಾಲ್ಕು ಅಭ್ಯರ್ಥಿಗಳಲ್ಲಿ ಒಳ್ಳೆಯವರ್ಯಾರು ಎನ್ನಲು ಭೂತಕನ್ನಡಿಯ ಮೊರೆ ಹೋಗಬೇಕಾದ ಪ್ರಮೇಯಗಳು ಇಲ್ಲದಿರುವುದಿಲ್ಲ. ಹೀಗಾಗಿ ಅತ್ಯಂತ

ಪುಟ 5 ಕ್ಕೆ ➤

**ದಾನಗಳಲ್ಲಿ ಪ್ರಧಾನವಾದ ದಾನಗಳೆಂದರೆ ನೇತ್ರದಾನ ಹಾಗೂ ಮತದಾನ. ನೇತ್ರದಾನವನ್ನು ನಾವು ಬದುಕಿಲ್ಲದಿರುವಾಗ ಬೇರೆಯವರ ಒಳಿತಿಗಾಗಿ ಮಾಡುವ ದಾನ. ಮತದಾನವೆಂದರೆ ನಮ್ಮ ಒಳಿತಿಗಾಗಿ ಮಾಡುವ ದಾನ. ದಾನವೆಂದರೆ ಯಾವುದೇ ಸ್ವಾರ್ಥವನ್ನು ಬಯಸದೇ, ಸ್ವಂತದ್ದನ್ನು ಇನ್ನೊಬ್ಬರಿಗೆ ನೀಡುವುದು. ಆದ್ದರಿಂದ ಈ ಬಾರಿ ಚುನಾವಣಾ ಸಮಯದಲ್ಲಿ ಮತದಾನ ಮಾಡುವಾಗ ನಮ್ಮ ಒಳಿತಿಗಾಗಿ ಒಳ್ಳೆಯ ವ್ಯಕ್ತಿಯನ್ನು ಆಯ್ಕೆ ಮಾಡಿ, ಯಾವುದೇ ಆಸೆ, ಆಮಿಷಗಳಿಗೆ ಬಲಿಯಾಗಿ "ದಾನ"ದ ಅರ್ಥಕ್ಕೆ ಅನರ್ಥ ಉಂಟು ಮಾಡಬೇಡಿ. ಯಾವುದೇ ಆಸೆ, ಆಮಿಷಗಳಿಗೆ ಬಲಿಯಾದರೆ ಆಯ್ಕೆಯ ಸ್ವಾತಂತ್ರ್ಯವನ್ನೇ ಕಳೆದು ಕೊಳ್ಳಬೇಕಾಗುತ್ತದೆ. ಯೋಚಿಸಿ, ಯೋಜಿಸಿ, ಚುನಾಯಿಸಿ.**

➢ ಪುಟ 4 ರಿಂದ.....

ಸಹಜವಾಗಿ ಮತದಾರನಿಗೆ ಈ ನಾಲ್ವರಲ್ಲಿ ಒಬ್ಬನ ಆಯ್ಕೆ ಅನಿವಾರ್ಯವೇ. ಇನ್ನು ಅನೇಕ ಬಾರಿ ಅಭ್ಯರ್ಥಿಯ ಅರ್ಹತೆಗಿಂತ ಆತನ ಪಕ್ಷ, ಜಾತಿ, ಮೊದಲಾದ ಸಂಗತಿಗಳೇ ಪ್ರಧಾನವಾಗುತ್ತವೆ. ನನ್ನ ಮತ ಈ ಬಾರಿ ಕಾಂಗ್ರೆಸ್ಗೆ, ಬಿಜೆಪಿಗೆ ಯಾ ಜೆಡಿಎಸ್ಗೆ ಎನ್ನುವ ಮಾತೇ ಅಧಿಕ ಹೊರತು ನನ್ನ ಮತ 'ಈ ಅಭ್ಯರ್ಥಿಗೆ' ಎನ್ನುವ ಮಾತು ಬಲು ಕ್ಷೀಣವಾಗಿ ಧ್ವನಿಸುವುದು ಸಾಮಾನ್ಯ.

ಈ ಚುನಾವಣೆಯಲ್ಲಿ ಮತದಾರನ ಪಾತ್ರ ಬಹು ಮಹತ್ತರ. ಈ ಕಳೆದ ಸರ್ಕಾರಗಳು ಅನುಭವಿಸಿದ ರಾಜಕೀಯ ಅರಾಜಕತೆಯಿಂದ ರಾಜ್ಯವನ್ನು ರಕ್ಷಿಸಬೇಕು. ರಾಜ್ಯದ ಒಟ್ಟು ಆಡಳಿತ ಯಂತ್ರವನ್ನು ಚುರುಕುಗೊಳಿಸುವತ್ತ ಮಾಧ್ಯಮಗಳು ದಿಟ್ಟತನವನ್ನು ಕಾಪಾಡಬೇಕಿದೆ. ಪ್ರಾಮಾಣಿಕತೆ ಪರೀಕ್ಷೆಗೊಳಪಡುವ ಸನ್ನಿವೇಶಗಳಲ್ಲಿ ದೃಢತೆಯನ್ನು ಕಾಪಾಡಬೇಕು. ತಮ್ಮ ತಮ್ಮ ಕೆಲಸವಾಗಲು ಪ್ರತಿನಿಧಿಗೆ ಕಾಸು–ಮತ್ತೊಂದು ಕೊಟ್ಟು ಕೆಲಸ ಮಾಡಿಸಿಕೊಳ್ಳಲೇಬಾರದು. ಈ ಭ್ರಷ್ಟತೆಯ ಅಮಲನ್ನು ಪ್ರಜೆಯೇ ಪ್ರತಿನಿಧಿಗೆ ಪರಿಚಯಿಸಬಾರದು. ಒಮ್ಮೆ ಅಮಲೇರಿದರೆ ಮತ್ತೆ ಅದು ಇಳಿಯುವುದು ಸಾಧ್ಯವೇ ಇಲ್ಲ.

ಈ ನಿಟ್ಟಿನಲ್ಲಿ ನಮ್ಮ ನಮ್ಮ ಕ್ಷೇತ್ರದ ಯೋಗ್ಯ ಅಭ್ಯರ್ಥಿಯನ್ನೇ ಆರಿಸೋಣ. ಆರಿಸಿದ ನಂತರ ಅವರನ್ನು ಕ್ರಿಯಾಶೀಲರನ್ನಾಗಿಸುವ ಹೊಣೆಗಾರಿಕೆಯಿಂದ ದೂರ ಸರಿಯದಿರೋಣ. ಹಣದ ಆಮಿಷ ಉದ್ಯೋಗದ ಪೊಳ್ಳು ಭರವಸೆಗಳಿಗೆ ಬಲಿಯಾಗದೆ ಪ್ರಜಾಪ್ರಭುತ್ವಕ್ಕೆ ಮಸಿ ಬಳಿಯುವ ಯತ್ನಗಳಿಂದ ದೂರವಿರೋಣ. ನಾಡು–ನುಡಿಗೆ ಧಕ್ಕೆ ತರುವ ಎಲ್ಲ ಸಂಗತಿಗಳಿಗೆ ಉಗ್ರವಾಗಿ ಪ್ರತಿಕ್ರಿಯಿಸಲು ಸಿದ್ಧವಾಗಿರೋಣ. ಒಟ್ಟಿನಲ್ಲಿ ಪಕ್ಷ ಭೇಧ ಮರೆತು ನಾಡಿನ ಸಂರಕ್ಷಣೆ ನಮ್ಮೆಲ್ಲರ ಆದ್ಯ ಕರ್ತವ್ಯವಾಗಲಿ. ರಾಜ್ಯ ರಾಜಕಾರಣ ಮತ್ತೆ ಗೊಂದಲದ ಗೂಡಾಗಿ ಅಭಿವೃದ್ಧಿ ಕುಂಠಿತವಾಗಿ, ಪತನದತ್ತ ಸಾಗುವುದನ್ನು ತಪ್ಪಿಸಲು ಈ ಚುನಾವಣೆ ಸೂಕ್ತ ಸಂದರ್ಭ. ಜಾಗೃತ ಮತದಾರನಿಗಷ್ಟೇ ಕ್ರಾಂತಿ ಸಾಧ್ಯ!

## ಅಭ್ಯರ್ಥಿಗಳನ್ನು ನಿಲ್ಲಿಸಿ, ಪ್ರಶ್ನಿಸಿ

- ಭ್ರಷ್ಟಾಚಾರ ರಹಿತ ಆಡಳಿತ ನಿಮ್ಮಿಂದ ನಿಜಕ್ಕೂ ನಿರೀಕ್ಷಿಸಬಹುದೇ?
- ಅಧಿಕಾರ ಕೈಗೆ ಸಿಕ್ಕಾಗ ಸಿದ್ಧಾಂತ–ಬದ್ಧತೆಗಳು ಮೂಲೆ ಸೇರಿಯಾವ?
- 'ಜನಸೇವೆಗೆ ಮುಡಿಪಾಗಿಟ್ಟ ಜೀವನ' ಎಂದರೆ ಸ್ವಂತಕ್ಕೆ ಆಸ್ತಿ–ಸಂಪತ್ತು ಸಂಪಾದಿಸುವುದೇ?
- ಕೃಷಿ ಸಮಸ್ಯೆಗೆ ಶಾಶ್ವತ ಪರಿಹಾರ ನಿಮ್ಮಲ್ಲಿದೆಯೇ?
- ಸಾವಯವ ಕೃಷಿಗೆ ನಿಮ್ಮ ಕೊಡುಗೆಯೇನು?
- ಗೋಹತ್ಯೆ ನಿಷೇಧ–ಗೋಸಂರಕ್ಷಣೆ ಬಗ್ಗೆ ನಿಮ್ಮ ನಿಲುವೇನು?
- ಭಯೋತ್ಪಾದನೆಗೆ ವಿರುದ್ಧವಾದ ಒಂದು ಗಟ್ಟಿ ಕಾನೂನು ತರಲು ನಿಮ್ಮಿಂದ ಸಾಧ್ಯವೇ?
- ಭಾರತೀಯ ಸಂಸ್ಕೃತಿ ಆಧಾರಿತ ಶಿಕ್ಷಣ ಜಾರಿಗೊಳಿಸುವಿರಾ?
- ಕುಟುಂಬ, ಸಮಾಜ ಒಡೆಯುವ ಮತಾಂತರಿಗಳ ಬಗ್ಗೆ ನಿಮ್ಮ ಕ್ರಮವೇನು?
- ಭ್ರಷ್ಟಾಚಾರ ನಿರ್ಮೂಲನೆಗೆ ನಿಮ್ಮ ಹೆಜ್ಜೆಗಳೇನು?
- ಭೂ ಅತಿಕ್ರಮಣ, ಅಕ್ರಮ ಗಣಿಗಾರಿಕೆ ತಡೆಯುವ ಧೈರ್ಯ ನಿಮಗಿದೆಯೇ?
- ಕನ್ನಡ ಭಾಷೆ? ಸಂಸ್ಕೃತಿ, ನೆಲ–ಜಲ ಉಳಿಸಲು ಏನು ಮಾಡುವಿರಿ?
- ಮೇಲು–ಕೀಲು ತೊಡೆದು ಸಾಮರಸ್ಯ ತರಲು ನಿಮ್ಮ ಚಿಂತನೆಯೇನು?
- ಅಲ್ಪಸಂಖ್ಯಾತರ ತುಷ್ಟೀಕರಣ ? ದೇಶಹಿತ, ಈ ಎರಡರಲ್ಲಿ ನಿಮ್ಮ ಆಯ್ಕೆ ಯಾವುದು?

ಮತದಾರ ಜಾಗೃತನಾದರೆ ಮಾತ್ರ, ರಾಜಕಾರಣಿಗಳೂ ಸರಿ ಹೋಗುತ್ತಾರೆ. ಪ್ರಜೆಯಾದವನು ಸದಾ ನಿದ್ರಿಸುತ್ತಿದ್ದರೆ, ಪ್ರಜಾಪ್ರತಿನಿಧಿ ಸರ್ವಾಧಿಕಾರಿಯಾಗುವುದರಲ್ಲಿ ಸಂಶಯವೇ ಇಲ್ಲ. ರಾಜಕಾರಣಿ ಸರಹೋದರೆ, ಮಿಕ್ಕ ಅನೇಕ ಸಂಗತಿಗಳು ತಾನಾಗಿಯೇ ಸರಿಹೋಗುತ್ತದೆ. ಸದಾ ಎಚ್ಚರದ ಸ್ಥಿತಿಯಲ್ಲಿರುವುದೇ ಪ್ರತಿಯೊಬ್ಬ ಪ್ರಜಾಪ್ರಭುತ್ವಕ್ಕೆ ನೀಡಬೇಕಾದ ಬೆಲೆಯಾಗಿದೆ.

ಯಾವುದೇ ಚುನಾವಣೆಯಿರಲಿ, ಅಲ್ಲಿ ಅಭ್ಯರ್ಥಿ ತನ್ನ ನಾಡು–ನುಡಿಯ ಸಂರಕ್ಷಣೆಗೆ ಸಾಯಲೂ ಸಿದ್ಧ ಎಂದು ಘೋಷಿಸಿ ನಂತರ ಸಾಯುವುದು ಬಿಡಿ, ನಿದ್ದೆಯಿಂದ ಏಳುವುದೂ ಇಲ್ಲ. ಈ ಜಡತ್ವದಿಂದ ಜನಪ್ರತಿನಿಧಿಗಳನ್ನು ಮತದಾರರೇ ಹೊರ ತರಬೇಕು. ಯಾಕೆಂದರೆ ಐದು ವರ್ಷಕ್ಕೊಮ್ಮೆ ಮತದಾನ ಮಾಡಿದರೆ ನಮ್ಮ ಕರ್ತವ್ಯ ಮುಗಿಯಿತು ಎಂಬ ಮಾನಸಿಕತೆಯಷ್ಟೇ ಸಾಲದು. ಜಾಗೃತ ಮತದಾರ ಎಂದೂ ಪ್ರಜಾಪ್ರಭುತ್ವದಲ್ಲಿ ಪ್ರಭುವಾಗಿಯೇ ಉಳಿಯುತ್ತಾನೆ. ಇಲ್ಲದಿದ್ದಲ್ಲಿ, ಪ್ರತಿನಿಧಿಯೇ ಪ್ರಭುವಾಗಿ, ಪ್ರಜೆ ಕೇವಲ ಸೇವಕನಾಗಿ ಸ್ಥಿತ್ಯಂತರಗೊಳ್ಳಬಹುದು. ಇಷ್ಟೇ, ಚುನಾವಣೆಯ ನಂತರವೂ ಜನಪ್ರತಿನಿಧಿಯನ್ನು ತುದಿಗಾಲ ಮೇಲೆ ನಿಲ್ಲಿಸುವ ಹೊಣೆಗಾರಿಕೆ ಮತದಾರನದ್ದು. ಮತದಾರ ತನ್ನೂರಿನ ಕೃಷಿ, ಶಿಕ್ಷಣ, ಆರೋಗ್ಯ, ರಸ್ತೆ ಮೊದಲಾದ ಮೂಲಭೂತ ಸೌಕರ್ಯಗಳ ಕುರಿತು ಅಗತ್ಯಗಳಿಗಾಗಿ ಪ್ರತಿನಿಧಿಯ ಗಮನ ಸೆಳೆಯಬೇಕು. ಹಾಗಾದಾಗ ಮಾತ್ರ ಮತದಾರ 'ಜಾಗೃತ' ಎನಿಸಲ್ಪಡುತ್ತಾನೆ. ಪ್ರಜಾಪ್ರಭುತ್ವ ಮತ್ತೆ ತೂಕಡಿಸದು.

ಸದೃಢ ಭಾರತ ಹಾಗೂ ಸಶಕ್ತ ಕರ್ನಾಟಕ ನಿರ್ಮಾಣಕ್ಕಾಗಿ ಮತ ಚಲಾಯಿಸಲು ಮರೆಯದಿರಿ

ಬನ್ನಿ, ಪವಿತ್ರ ರಾಷ್ಟ್ರೀಯ ಕರ್ತವ್ಯವನ್ನು ನೆರವೇರಿಸಿ. ನಿಮ್ಮ ಅಮೂಲ್ಯ ಮತವನ್ನು ಚಲಾಯಿಸಿ. ಮತದಾನ – ಒಂದು ಪವಿತ್ರ ರಾಷ್ಟ್ರೀಯ ಕರ್ತವ್ಯ, ಮತವನ್ನು ಚಲಾಯಿಸಿ, ದಯವಿಟ್ಟು ಕೂರಬೇಡಿ. ಮತವನ್ನು ಮಾರಬೇಡಿ. ಆಯ್ಕೆ ನಿಮ್ಮದು. ಆದರೆ ಯೋಚಿಸಿ ಆರಿಸಿ.

## ಪ್ರಜ್ಞಾವಂತ ಮತದಾರರೇ,
## ಮತಗಟ್ಟೆಗೆ ಹೋಗುವ ಮುನ್ನ ಸ್ವಲ್ಪ ಯೋಚಿಸಿ.

- ಸಂಪೂರ್ಣ ಹದಗೆಟ್ಟ ಕಾನೂನು ಸುವ್ಯವಸ್ಥೆ. 2012ರಿಂದ ಕರ್ನಾಟಕದಲ್ಲಿ ಅಪರಾಧಗಳು ಮೂರುಪಟ್ಟು ಹೆಚ್ಚಾಗಿವೆ. 2012ರಲ್ಲಿ ಒಟ್ಟು 3.2ಲಕ್ಷ ಅಪರಾಧಗಳು ನಡೆದಿದ್ದರೆ 2017ರಲ್ಲಿ ನಡೆದದ್ದು 11.3 ಲಕ್ಷ ಪ್ರಕರಣಗಳು. ರಾಜಧಾನಿ ಬೆಂಗಳೂರು ಅಪರಾಧಗಳಲ್ಲಿ ದೇಶದಲ್ಲೇ ಎರಡನೇ ಸ್ಥಾನದಲ್ಲಿ!
- ಪ್ರತಿನಿತ್ಯ ವರದಿಯಾಗುತ್ತಿರುವ ಮಂತ್ರಿ, ಶಾಸಕ, ಅವರ ಮಕ್ಕಳು ಅಷ್ಟೇ ಅಲ್ಲದೇ ಆಳುವ ಪಕ್ಷದ ಮರಿಪುಢಾರಿಗಳ ಗೂಂಡಾಗಿರಿ ಪ್ರಕರಣಗಳು.

ಪುಟ 9 ಕ್ಕೆ ➢

## ಸಂಘದ ವಾರ್ತೆ

# ರಾಜ್ಯ ಕಾರ್ಯಕಾರಿಣಿ ಸಭೆ

ಮತ್ತೊಮ್ಮೆ ದೇಶವನ್ನು ಉನ್ನತ ಸ್ಥಾನಕ್ಕೇರಿಸಲು ಪ್ರತಿಯೊಬ್ಬರೂ ಸಂಕಲ್ಪ ತೊಟ್ಟು ತಮ್ಮ ತಮ್ಮ ಜವಾಬ್ದಾರಿಯನ್ನು ದೇಶದ ಭವಿಷ್ಯದ ದೃಷ್ಟಿಯಿಂದಲೇ ಕಾರ್ಯ ನಿರ್ವಹಿಸುವಂತೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಮಾರ್ಗದರ್ಶಕರಾದ ಕೃ. ನರಹರಿಯವರು ದಿನಾಂಕ 30.03.2018 ರಂದು ಯಾದವಸ್ಮೃತಿ, ಬೆಂಗಳೂರಿನಲ್ಲಿ ನಡೆದ ರಾಜ್ಯ ಕಾರ್ಯಕಾರಿಣಿಯಲ್ಲಿ ಸಂಘದ ಕಾರ್ಯಕರ್ತರಿಗೆ ಕರೆ ನೀಡಿದರು. ಸಾಮೂಹಿಕ ಸರಸ್ವತಿ ಪ್ರಾರ್ಥನೆಯೊಂದಿಗೆ ಸಭೆಯನ್ನು ಆರಂಭಿಸಲಾಯಿತು. ಸಭಾ ವೇದಿಕೆಯ ಪ್ರಮುಖರನ್ನು ಸಭೆಗೆ ಪರಿಚಯಿಸುತ್ತಾ ಸಭಾಸದಸ್ಯರೆಲ್ಲರನ್ನು ಸಭೆಗೆ ಸಹ ಪ್ರಧಾನಕಾರ್ಯದರ್ಶಿಯವರಾದ ಶ್ರೀ ಸಂದೀಪ್ ಬೂದಿಹಾಳ್‌ರವರು ಸ್ವಾಗತಿಸಿದರು. ನಂತರ ಸಭೆಯ ಸದಸ್ಯರೆಲ್ಲರೂ ತಮಗೆ ಹಂಚಿಕೆಯಾಗಿರುವ ಜವಾಬ್ದಾರಿಯನ್ನು ಸಭೆಗೆ ತಿಳಿಸುತ್ತಾ ತಮ್ಮ ಪರಿಚಯ ಮಾಡಿಕೊಂಡರು.

ದಿನಾಂಕ 12.11.2017 ರ ಹುಬ್ಬಳ್ಳಿಯಲ್ಲಿ ನಡೆದ ರಾಜ್ಯ ಕಾರ್ಯಕಾರಿಣಿಯ ಸಭಾ ನಡಾವಳಿಯನ್ನು ಸಭೆಗೆ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಚಿದಾನಂದ್ ಪಾಟೀಲ್ ರವರು ತಿಳಿಸಿದರು. ನಂತರ ದಿನಾಂಕ 12.11.2017ರಿಂದ ಈ ಅವಧಿಯವರೆಗೆ ನಡೆಸಲಾದ ಸಂಘಟನಾ ಚಟುವಟಿಕೆಗಳ ಬಗ್ಗೆ ಜಿಲ್ಲಾವಾರು ಮಾಹಿತಿಯನ್ನು ಆಯಾ ಜಿಲ್ಲಾ ಮುಖ್ಯಸ್ಥರು ಸಭೆಗೆ ನೀಡಿದರು. ಜನವರಿಯಲ್ಲಿ ನಡೆಸಿದ ಕರ್ತವ್ಯಬೋಧ ದಿನ ಹಾಗೂ ಒಂದು ದೇಶ, ಒಂದು ಶಿಕ್ಷಣ, ಒಂದು ವೇತನದ ಸಲುವಾಗಿ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ನೀಡುವುದು ಮುಂತಾದವು ವರದಿಯಲ್ಲಿ ಪ್ರಮುಖವಾಗಿದ್ದವು.

ಸಂಘದ ಪ್ರಮುಖ ಮಾರ್ಗದರ್ಶಕರು ಹಾಗೂ ಹಿರಿಯರು ಆದ ಕೃ. ನರಹರಿಯವರ ಅಭಿನಂದನಾ ಸಮಾರಂಭದ ಸಂಕ್ಷಿಪ್ತ ಮಾಹಿತಿಯನ್ನು ಸಭೆಗೆ ಸಂಘದ ಹಿರಿಯರಾದ ಶ್ರೀ ನಾಗಭೂಷಣ್‌ರವರು ತಿಳಿಸಿತ್ತಾ ಈ ಅಭಿನಂದನಾ ಕಾರ್ಯಕ್ರಮ ಯಶಸ್ವಿಯಾಗಲು ಶ್ರಮಿಸಿದ ಪ್ರತಿಯೊಬ್ಬ ಕಾರ್ಯಕರ್ತರಿಗೂ ಹಾಗೂ ಅಭಿನಂದನಾ ಸಮಾರಂಭದಲ್ಲಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ ಸಭಿಕರಿಗೂ ಧನ್ಯವಾದ ತಿಳಿಸಿದರು.

ಪಠ್ಯಪುಸ್ತಕ ಪರಿಷ್ಕರಣಾ ಸಂದರ್ಭದಲ್ಲಿ ಆದ ಅನಾಹುತಗಳು, NCERT ಸೂಚನೆ, ಆದೇಶಗಳನ್ನು ಮೀರಿ ರಾಜ್ಯ ಸರ್ಕಾರ ಪಠ್ಯವಿಷಯದ ವಿಷಯದಲ್ಲಿ ನಿರ್ಮಿಸಿರುವ ಗೊಂದಲದ ಬಗ್ಗೆ ಶ್ರೀ ಅರುಣ್ ಶಹಾಪೂರ್‌ರವರು ಸಭೆಗೆ ಮಾಹಿತಿ ನೀಡುತ್ತಾ 1 ರಿಂದ 10 ನೇ ತರಗತಿಯವರೆಗೆ ಎಲ್ಲಾ ವಿಷಯಗಳ ಪಠ್ಯಪುಸ್ತಕದಲ್ಲಿರುವ ನ್ಯೂನತೆಗಳನ್ನು ಸರಿಮಾಡಲಾಗದೆ ತೋರಿಕೆಯ ತಿದ್ದುಪಡಿ ಮಾಡಿ ಪಠ್ಯಪುಸ್ತಕವನ್ನು ಹೊರತಂದಿರುವುದು ದುರಂತದ ವಿಷಯವೆಂದು ಸಭೆಗೆ ತಿಳಿಸಿದರು. ಮುಂಬರುವ ಶೈಕ್ಷಣಿಕ ಅವಧಿಯಲ್ಲಾದರೂ ಈ ನ್ಯೂನತೆಗಳನ್ನು ಸರಿಪಡಿಸಲು ಸಂಘಟನೆಯ ಪ್ರಯತ್ನವನ್ನು ಸಭೆಗೆ ತಿಳಿಸಿದರು. ನಂತರದ ಅವಧಿಯಲ್ಲಿ ಶ್ರೀ ಅರುಣ್ ಶಹಾಪೂರ್, MLC, ರವರು ಕಾಲ್ಪನಿಕ ವೇತನ ಸಮಸ್ಯೆ, ವೇತನ ತಾರತಮ್ಯ, ಪಠ್ಯ ವಿಷಯ ಗೊಂದಲ, ವರ್ಗಾವಣೆ ನಿಯಮ ಮತ್ತು ಸಡಿಲಿಕೆ ಮುಂತಾದ ವಿಷಯಗಳಲ್ಲಿ ಸಭಿಕರ ಪ್ರಶ್ನೆಗಳಿಗೆ ಸಮರ್ಪಕ ಉತ್ತರ, ಮಾಡಬಹುದಾದ ಹೋರಾಟಗಳ ಬಗ್ಗೆ ಸಮಗ್ರ ಮಾಹಿತಿ ನೀಡುತ್ತಾ ಮುಂದಿನ ದಿನಗಳಲ್ಲಿ ಹೊಸ ಸರ್ಕಾರದ ಅವಧಿಯಲ್ಲಿ ಈ ಎಲ್ಲಾ ಗೊಂದಲ–ಸಮಸ್ಯೆಗಳಿಗೆ ಪರಿಹಾರ ಪಡೆಯೋಣ ಎಂಬ ಆಶಯ ವ್ಯಕ್ತಪಡಿಸಿದರು.

01.04.17 ರಿಂದ 31.03.2018 ರವರೆಗಿನ ಆಯವ್ಯಯವನ್ನು ರಾಜ್ಯ ಖಜಾಂಚಿ ಶ್ರೀ ಜೋಷಿಯವರು ವಿವರಗಳೊಂದಿಗೆ ಸಭೆಗೆ ವಿವರಿಸಿದರು. ದಿನಾಂಕ 01.04.2018 ರಿಂದ 31.03.2019 ರವರೆಗಿನ ಮುಂಗಡ ಆಯವ್ಯಯವನ್ನು ಅವರು ವಿವರದೊಂದಿಗೆ ಓದಿ ಹೇಳಿದರು. ಮೇಲಿನ ಆಯವ್ಯಯ ಹಾಗೂ ಮುಂಗಡ ಆಯವ್ಯಯ ವಿವರಗಳನ್ನು ಸಭೆ ಸರ್ವಾನುಮತದಿಂದ ಒಪ್ಪಿಗೆ ನೀಡಿ ಅನುಮೋದಿಸಿತು.

2018–19 ನೇ ಸಾಲಿನ ವಾರ್ಷಿಕ ಯೋಜನೆಯನ್ನು ಸಭೆಗೆ ತಿಳಿಸಲಾಯಿತು. ಸಂಘಟನಾ ಕಾರ್ಯ ವಿಸ್ತರಿಸಲು ಕೇಂದ್ರಿಯ ಪ್ರಮುಖರು, ವಿಭಾಗೀಯ ಪ್ರಮುಖರು ಜಿಲ್ಲೆಯ ಪ್ರವಾಸ ಮಾಡುವಂತೆ ನಿರ್ಣಯ ಮಾಡಲಾಯಿತು. ಜುಲೈ ತಿಂಗಳಲ್ಲಿ ವಸತಿ ಶಾಲೆಗಳ ರಾಜ್ಯಮಟ್ಟದ ಸಭೆ, ದೈಹಿಕ ಶಿಕ್ಷಕರ ಸಭೆ, ಚಿತ್ರಕಲಾ ಶಿಕ್ಷಕರ ಸಭೆ, ವಿಷಯ ಶಿಕ್ಷಕರ ಸಭೆ, ಮಹಿಳಾ ಸಮಾವೇಶ ನಡೆಸುವ ನಿರ್ಣಯ ಕೈಗೊಳ್ಳಲಾಯಿತು. ಗುರುವಂದನಾ ಕಾರ್ಯಕ್ರಮ, ಪ್ರತಿಭಾ ಪುರಸ್ಕಾರ, ವಿಭಾಗಾವಾರು ಅಭ್ಯಾಸವರ್ಗಗಳನ್ನೂ ಸಹ ಮಾಡುವ ನಿರ್ಣಯ ಮಾಡಲಾಯಿತು. ನವೆಂಬರ್ 2018 ರಲ್ಲಿ ಸಂಘಟನೆಗೆ 51 ವರ್ಷ ತುಂಬಿದ ಸಂದರ್ಭದಲ್ಲಿ ಮಹಾಸಮ್ಮೇಳನವೊಂದನ್ನು ಬೆಂಗಳೂರಿನಲ್ಲಿ ನಡೆಸಲು ನಿರ್ಣಯಿಸಲಾಯಿತು.

ಇದುವರೆಗೂ ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರದ ಸಂಪಾದಕರಾಗಿದ್ದ ಶ್ರೀಯುತ ಎನ್. ನಾಗರಾಜರವರಿಗೆ ಸಭೆ ಅವರ ಕಾರ್ಯವೈಖರಿಯನ್ನು ಶ್ಲಾಘಿಸಿ ಅಭಿನಂದನೆ ತಿಳಿಸಿತು. ಶಿಕ್ಷಕ ಸಮಾಚಾರದ ಸಂಪಾದಕಿಯಾಗಿ ಶ್ರೀಮತಿ ಮಮತಾ ಡಿ.ಕೆ. ಯವರನ್ನು ಸಭೆ ಸರ್ವಾನುಮತದಿಂದ ಆಯ್ಕೆ ಮಾಡಿತು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯಾಧ್ಯಕ್ಷರಾಗಿರುವ ಶ್ರೀ ಶಿವಾನಂದ ಸಿಂಧನಕೇರರವರನ್ನು ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆ ಮಾಡಿರುವ ಸಲುವಾಗಿ ಅವರನ್ನು ಅಧ್ಯಕ್ಷ ಸ್ಥಾನದಿಂದ ಮುಕ್ತರನ್ನಾಗಿಸಲಾಯಿತು. ಹಾಗೂ ರಾಜ್ಯ ಮಟ್ಟದಲ್ಲಿ ಅವರ ಮಾರ್ಗದರ್ಶನ ಅತ್ಯಾವಶ್ಯಕವೆಂದು ವಿನಂತಿಸಿಕೊಳ್ಳಲಾಯಿತು.

ಹೊಸ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆಗಾಗಿ ಹಿರಿಯರಾದ ಶ್ರೀಯುತ ಕೃ. ನರಹರಿ ಜಿಯವರನ್ನು ಚುನಾವಣಾ ಅಧಿಕಾರಿಯನ್ನಾಗಿ ಸಭೆ ನೇಮಿಸಿತು. ಅವರು ಅಧ್ಯಕ್ಷರ ಆಯ್ಕೆಗೆ ಚಾಲನೆ ನೀಡುತ್ತಾ ಸಭೆಯ ಎಲ್ಲಾ ಸದಸ್ಯರ, ರಾಜ್ಯ ಪದಾಧಿಕಾರಿಗಳ ಸಲಹೆ, ಕೋರಿಕೆಯಂತೆ ಶ್ರೀ ಸಂದೀಪ್ ಬೂದಿಹಾಳ್‌ರವರನ್ನು ಸರ್ವಾನುಮತದಿಂದ ಕ.ರಾ.ಮಾ.ಶಿ. ಸಂಘದ ನೂತನ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಘೋಷಿಸಿದರು. ಸಹ ಪ್ರಧಾನ ಕಾರ್ಯದರ್ಶಿಯಾಗಿ ಶ್ರೀಯುತ ಗಂಗಾಧರ್ ಹಾಗೂ ಮಹಿಳಾ ಪ್ರಮುಖರಾಗಿ ಶ್ರೀಮತಿ ವಾಸುಕಿಯವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಸಭಿಕರೆಲ್ಲರಿಗೂ ಮಾಧ್ಯಮ ಪ್ರಕೋಷ್ಠದ ಪ್ರಮುಖರಾದ ಶ್ರೀಮತಿ ವಿಜಯಲಕ್ಷ್ಮಿಯವರು ವಂದಿಸಿದರು. ಶಾಂತಿಮಂತ್ರದೊಂದಿಗೆ ಕಾರ್ಯಕಾರಿಣಿಗೆ ಮುಕ್ತಾಯಗೊಂಡಿತು.

ವರದಿ : ಮಮತಾ ಡಿ.ಕೆ.


ಪುಟ 10 ಕ್ಕೆ ➤

# ಭಾರತೀಯ ಭಾಷೆಗಳ ಸಂರಕ್ಷಣೆ ಮತ್ತು ಸಂವರ್ಧನೆ ಅಗತ್ಯ



**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**

'ರಾಷ್ಟ್ರೀಯ ಸ್ವಯಂ ಸೇವಕ ಸಂಘ' ಸಾಮಾಜಿಕ ಕಳಕಳಿಯುಳ್ಳ, ರಾಷ್ಟ್ರಹಿತಕ್ಕೆ ಬದ್ಧತೆಯುಳ್ಳ, ಭಾರತದ ಅತಿದೊಡ್ಡ ದೇಶಭಕ್ತ ಸ್ವಯಂಸೇವಕರನ್ನೊಳಗೊಂಡ ಸ್ವಯಂಸೇವಾ ಸಂಘಟನೆ. ಪ್ರತಿವರ್ಷದ ಮಾರ್ಚ್ ತಿಂಗಳಲ್ಲಿ ಅದರ ಅಖಿಲ ಭಾರತೀಯ ಪ್ರತಿನಿಧಿ ಸಭೆ ನಡೆಯುತ್ತದೆ. ಈ ಸಭೆಯಲ್ಲಿ ಆಯಾ ಕಾಲ ಖಂಡದಲ್ಲಿನ ಮಹತ್ವಗಳ ಕುರಿತಾದ ನಿರ್ಣಯವನ್ನು ಸ್ವೀಕರಿಸಲಾಗುತ್ತದೆ. 'ನಿರ್ಣಯ'ವನ್ನು ನಿರ್ಣಯದ ಸಲುವಾಗಿ ಅಂಗೀಕರಿಸುವ ಜಾಯಮಾನ ಆರ್‌ಎಸ್‌ಎಸ್‌ನದಲ್ಲ. ಆ ನಿರ್ಣಯವನ್ನು ಶತಾಯುಗತಾಯ ಜಾರಿಗೊಳಿಸಲು ಏನೆಲ್ಲ ಪ್ರಯತ್ನ ಮಾಡಬೇಕೆಂಬುದನ್ನು ನಿರ್ಧರಿಸಿ, ಅದನ್ನು ಕಾರ್ಯಾನ್ವಯಗೊಳಿಸುವ ಸಂಕಲ್ಪ ಮಾಡಿಯೇ ನಿರ್ಣಯವನ್ನು ಸ್ವೀಕರಿಸುವುದು.




ಈ ವರ್ಷ ಮಾರ್ಚ್ ಎರಡನೇವಾರದಲ್ಲಿ ಅಖಿಲ ಭಾರತೀಯ ಪ್ರತಿನಿಧಿ ಸಭೆ ನಾಗಪುರದಲ್ಲಿ ನಡೆಯಿತು. ಈ ಸಭೆಯಲ್ಲಿ ದೇಶದ ಎಲ್ಲೆಡೆಯಿಂದ ಬಂದ ಆರ್‌ಎಸ್‌ಎಸ್ ಮತ್ತು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಕೆಲಸಮಾಡತ್ತಿರುವ ವಿವಿಧ ಸಂಘಟನೆಗಳ 1538 ಕಾರ್ಯಕರ್ತರು ಭಾರತೀಯ ಭಾಷೆಗಳನ್ನು ಸಂರಕ್ಷಿಸಿ ಬೆಳೆಸುವ ಮಹತ್ವದ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಿದರು. ಅದರ ಪೂರ್ಣಪಾಠ ಈ ಕೆಳಗಿನಂತಿದೆ.

'ಭಾಷೆ ಎಂಬುದು ಯಾವುದೇ ವ್ಯಕ್ತಿ ಅಥವಾ ಸಮಾಜವನ್ನು ಸಂಸ್ಕೃತಿಯನ್ನು ಗುರುತಿಸುವ ಬಹು ಮುಖ್ಯ ಅಂಶವಾಗಿದೆ' ಎಂಬುದು ಅಖಿಲ ಭಾರತೀಯ ಪ್ರತಿನಿಧಿ ಸಭೆಯ ಸ್ಪಷ್ಟ ನಿಲುವಾಗಿದೆ. ನಮ್ಮ ಸಂಸ್ಕೃತಿ, ಉದಾತ್ತ ಸಂಪ್ರದಾಯಗಳು, ಅತ್ಯುತ್ತಮ ಜ್ಞಾನ, ವ್ಯಾಪಕವಾದ ಸಾಹಿತ್ಯ ಇವುಗಳನ್ನು ಪಸರಿಸಲು, ಉಳಿಸಲು, ಸೃಜನಾತ್ಮಕ ಚಿಂತನೆಯನ್ನು ಪ್ರೋತ್ಸಾಹಿಸಲು ನಮ್ಮ ದೇಶದ ವಿವಿಧ ಭಾಷೆಗಳು ಭಾಷೆಗಳಲ್ಲಿ ಮೌಖಿಕವಾಗಿ ಹರಿದು ಬಂದ ಜನಪದ ಸಾಹಿತ್ಯ, ಹಾಡು, ನುಡಿಗಟ್ಟು, ಗಾದೆಗಳ ಸಂಖ್ಯೆಯು ಬರಹದ ಮೂಲಕ ಹರಡಿರುವ ಸಾಹಿತ್ಯಕಿಂತಲೂ ಹೆಚ್ಚು. ಇಂದು ಭಾರತೀಯ ಭಾಷೆಗಳನ್ನು ಬಳಸದೇ ವಿದೇಶೀ ಶಬ್ದಗಳನ್ನು ಬಳಸುತ್ತಾ ಹೋದಂತೆ ಭಾರತೀಯ ಭಾಷೆಗಳಿಗೆ ಅಪಾಯ ಎದುರಾಗಿದೆ. ದೇಶದ ಎಷ್ಟೋ ಭಾಷೆಗಳ, ಉಪಭಾಷೆಗಳು ಅಳಿವಿನ ಅಂಚಿಗೆ ಇಂದು ಬಂದಿವೆ. ಸರಕಾರಗಳು, ನೀತಿ ನಿರೂಪಕರು, ಸ್ವಯಂಸೇವಾ ಸಂಸ್ಥೆಗಳು, ಹಾಗೂ ಬಹು ಮುಖ್ಯವಾಗಿ ಸಮಾಜವೂ ಈ ವಿಷಯದಲ್ಲಿ ಜಾಗರೂಕರಾಗುವುದಲ್ಲದೇ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿ, ಭಾರತೀಯ ಭಾಷೆಗಳನ್ನು ಉಳಿಸುವ ಹಾಗೂ ಬೆಳೆಸುವ ಕೆಲಸವನ್ನು ಮಾಡಬೇಕಾಗದ ಅಗತ್ಯವಿದೆ.

**ಈ ನಿಟ್ಟಿನಲ್ಲಿ ಮಾಡಬೇಕಾದ ಕೆಲವು ಪ್ರಯತ್ನಗಳು ಇಲ್ಲಿವೆ.**

- ಶಾಲೆಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮಾತೃಭಾಷೆಯಲ್ಲಿ ಅಥವಾ ಇನ್ನಾವುದೇ ಭಾರತೀಯ ಭಾಷೆಗಳಲ್ಲೇ ನೀಡಬೇಕು. ಈ ನಿಟ್ಟಿನಲ್ಲಿ ಸರಕಾರಗಳು ಸೂಕ್ತ ನೀತಿಗಳನ್ನು ರೂಪಿಸಬೇಕು. ಪೋಷಕರೂ ತಮ್ಮ ಮಕ್ಕಳಿಗೆ ಭಾರತೀಯ ಭಾಷೆಯ ಮಾಧ್ಯಮದಲ್ಲಿ ಶಿಕ್ಷಣ ನೀಡುವಲ್ಲಿ ಸಹಕರಿಸಬೇಕು.
- ತಾಂತ್ರಿಕ, ವೈದ್ಯಕೀಯ ಶಿಕ್ಷಣಕ್ಕೂ ಭಾರತೀಯ ಭಾಷೆಗಳಲ್ಲಿ ಪುಸ್ತಕಗಳು ಹೊರಬರಬೇಕು. ಪರೀಕ್ಷೆಗಳೂ ನಮ್ಮ ಭಾಷೆಗಳಲ್ಲಿಯೇ ನಡೆಯಬೇಕು.
- ನೀಟ್, ಯುಪಿಎಸ್ಸಿ ಪರೀಕ್ಷೆಗಳು ಭಾರತೀಯ ಭಾಷೆಗಳಲ್ಲಿ ನಡೆಯುವುದು ಸ್ವಾಗತಾರ್ಹ. ಅಂತೆಯೇ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನೂ ಭಾರತೀಯ ಭಾಷೆಗಳಲ್ಲಿಯೇ ನಡೆಸಬೇಕು.
- ಸರಕಾರಿ ಸಂಸ್ಥೆ, ನ್ಯಾಯಾಂಗ ವ್ಯವಸ್ಥೆಯಲ್ಲಿ ಭಾರತೀಯ ಭಾಷೆಗಳಿಗೆ ಆದ್ಯತೆ ನೀಡಬೇಕು. ಆಂಗ್ಲ ಭಾಷೆಗೆ ಆದ್ಯತೆ ಕೊಡದೇ ಭಾರತೀಯ ಭಾಷೆಗಳನ್ನು ಉತ್ತೇಜಿಸುವ ಕೆಲಸ ಸರಕಾರಿ, ಸರಕಾರೇತರ ಸಂಸ್ಥೆಗಳಲ್ಲಿ ಬಡ್ತಿಗಳಿಗೆ, ಅಲ್ಲಿಯ ಕಾರ್ಯಕ್ರಮಗಳಲ್ಲಿ, ಸಮರ್ಪಕವಾಗಿ ಆಗಬೇಕು.
- ಸ್ವಯಂಸೇವಕರು ಸೇರಿದಂತೆ ಇಡೀ ಸಮಾಜ ತಮ್ಮ ದೈನಂದಿನ ಸಂವಹನಕ್ಕೆ ಮಾತೃಭಾಷೆಯನ್ನು ಬಳಸುವಲ್ಲಿ ಮುಂದಾಗಬೇಕು. ಮಾತೃಭಾಷೆಯಲ್ಲಿನ ಸಾಹಿತ್ಯಗಳನ್ನು ಓದುವ ಅಭ್ಯಾಸ ರೂಢಿಸಿಕೊಳ್ಳಬೇಕು. ಅಲ್ಲದೇ ಭಾರತೀಯ ಭಾಷೆಯ ನಾಟಕಗಳು, ಸಂಗೀತ, ಜಾನಪದ ಸಾಹಿತ್ಯವನ್ನು ಹೆಚ್ಚು ಉತ್ತೇಜಿಸಬೇಕು, ಪ್ರೋತ್ಸಾಹಿಸಬೇಕು.
- ನಮ್ಮ ಮಾತೃಭಾಷೆಯ ಬಗ್ಗೆ ಅಭಿಮಾನ, ಗೌರವವಿರಿಸಿಕೊಳ್ಳುವುದರ ಜೊತೆಗೆ, ಇತರೆ ಭಾರತೀಯ ಭಾಷೆಗಳನ್ನು ಸಮಾನ ದೃಷ್ಟಿಯಿಂದ ಕಾಣಬೇಕು. ಭಾಷೆಗಳು ಭಾರತೀಯ ಸಮಾಜವನ್ನು ಒಗ್ಗೂಡಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸಿವೆ.
- ಕೇಂದ್ರ ಹಾಗೂ ರಾಜ್ಯ ಸರಕಾರಗಳು ಭಾರತೀಯ ಭಾಷೆ, ಉಪಭಾಷೆ, ಲಿಪಿಗಳನ್ನು ಉಳಿಸಿ, ಬೆಳೆಸಲು ಯೋಜನೆಗಳನ್ನು ರೂಪಿಸಬೇಕು.
- ವಿವಿಧ ದೇಶಗಳ ಭಾಷೆಗಳನ್ನು ಜ್ಞಾನದ ವೃದ್ಧಿಗಾಗಿ ಕಲಿಯುವುದನ್ನು ಪ್ರತಿನಿಧಿ ಸಭೆಯು ಒಪ್ಪುತ್ತದೆ. ಭಾರತದಂತಹ ಬಹುಭಾಷಾ ದೇಶದಲ್ಲಿ ನಮ್ಮ ನಾಡಿನ ಸಂಸ್ಕೃತಿಯನ್ನು ಉಳಿಸುವ ನಿಟ್ಟಿನಲ್ಲಿ ಭಾರತೀಯ ಭಾಷೆಗಳ ಸಂರಕ್ಷಣೆ ಮತ್ತು ಸಂವರ್ಧನೆಯ ಅಗತ್ಯವಿದೆ. ಪ್ರತಿನಿಧಿ ಸಭೆಯು ಸರಕಾರಗಳಿಗೆ, ಸರಕಾರೇತರ ಸಂಸ್ಥೆಗಳಿಗೆ, ಸ್ವಯಂಸೇವಾ

ಪುಟ 10 ಕ್ಕೆ ➤

ಭೂರಮೆ

# ಸ್ತ್ರೀ ಶಕ್ತಿಯ ಸಂಕೇತ ಇಂದಿರಾ ದೇಶಪಾಂಡೆ

ನಂ. ನಾಗಲಕ್ಷ್ಮಿ
ನಿವೃತ್ತ ಕನ್ನಡ ಉಪನ್ಯಾಸಕರು
ಸರ್ಕಾರಿ ಪ.ಪೂ. ಕಾಲೇಜು, ಬೆಂಗಳೂರು

ಕ್ರಿಯಾಶೀಲ ಮನಸ್ಸು ಹಲವು ಚಟುವಟಿಕೆಗಳ ಆಗರವಾಗುತ್ತದೆ. ಎಲ್ಲೇ ಇರಲಿ, ಏನಾದರೊಂದು ಉಪಯುಕ್ತ ಕಾರ್ಯ ಮಾಡಲೇಬೇಕೆಂದು ಆರೋಗ್ಯಕರವಾದ ನಿಟ್ಟಿನಲ್ಲಿ ಚಲನಶೀಲವಾಗುತ್ತದೆ. ಇಂತಹದೊಂದು ಚೇತನ 'ಇಂದಿರಾ ದೇಶಪಾಂಡೆ' ಎಂಬ ಮಹಿಳೆ. ಸಾಹಿತ್ಯ, ಸಂಗೀತಗಳ ಸಂಗಮವೆನಿಸಿದ ಧಾರವಾಡದ ಈ ಹೆಣ್ಣುಮಗಳು ಹಲವು ವ್ಯಕ್ತಿಗಳಿಗೆ, ಸಂಸ್ಥೆಗಳಿಗೆ ಮಾರ್ಗದರ್ಶನ ನೀಡಿದವರು.

ಇಂದಿರಾ ದೇಶಪಾಂಡೆಯವರ ಬದುಕು ಮಹಿಳೆಯ ಧೀಶಕ್ತಿಗೆ ಸೂಕ್ತ ನಿದರ್ಶನ. ಹೆಣ್ಣು ದೃಢಮನಸ್ಕಳೂ, ಧೈರ್ಯಶಾಲಿಯೂ, ವಿವೇಕಿಯೂ ಕರ್ತವ್ಯಪ್ರಜ್ಞೆಯುಳ್ಳವಳೂ ಆಗಿದ್ದರೆ ಎಂತಹ ಗಂಭೀರ ಸಮಸ್ಯೆಯನ್ನೂ ಎದುರಿಸಬಲ್ಲಳೆಂಬುದಕ್ಕೆ ಅವರ ಬದುಕೇ ಒಂದು ಜ್ವಲಂತ ನಿದರ್ಶನ.

ಧಾರಡವಾಡದಲ್ಲಿ ಖ್ಯಾತ ಶಿಕ್ಷಕರಾಗಿದ್ದ ತಟ್ಟಿ ಶಾಮರಾಯರು ಇಂದಿರಾ ದೇಶಪಾಂಡೆಯವರ ತಂದೆ. ಅವರು ಸಂಗೀತ, ಸಾಹಿತ್ಯದ ಆರಾಧಕರಾಗಿದ್ದವರು. ಮನೆಯಲ್ಲಿ ಸಾಹಿತ್ಯವಲಯದ ಹಲವು ಪ್ರತಿಭಾವಂತರ ಸಮಾವೇಶ. ಬೇಂದ್ರೆ, ಶಂ.ಬಾ. ಜೋಷಿ, ಗೋಕಾಕ್, ಬೆಟಗೇರಿ ಕೃಷ್ಣಶರ್ಮ ಮೊದಲಾದ ಸಾಹಿತ್ಯ ದಿಗ್ಗಜರ ಭೇಟಿಯಿಂದ ಅಲ್ಲಿ ನಡೆಯುತ್ತಿದ್ದ ಗೋಷ್ಠಿಗಳಿಗೆ ವಿಶೇಷಕಳೆ. ಸ್ವತಃ ಕೊಳಲುವಾದಕರೂ ಆಗಿದ್ದ ಶಾಮರಾಯರ ಉತ್ಸಾಹದ ಫಲವೇ ಮನೆಯಲ್ಲಿ ಸದಾ ಕರ್ನಾಟಕ ಮಾತು ಹಿಂದೂಸ್ತಾನೀ ಸಂಗೀತ ಕಛೇರಿಗಳ ಹಬ್ಬ. ಗುರುರಾವ್ ದೇಶಪಾಂಡೆಯಂತಹ ಹಿರಿಯ ವಿದ್ವಾಂಸರ ಗಾಯನವೂ ಅಲ್ಲಿ ಲಭ್ಯ. ಎಲ್ಲವೂ ಸೇರಿ ಮನೆ ಸರಸ್ವತೀ ನಿಲಯವೇ ಆಗಿಬಿಟ್ಟಿತ್ತು. ಹಾಗಾಗಿ ಬಾಲಕಿ ಇಂದಿರಾ ಒಬ್ಬ ಕ್ರಿಯಾಶೀಲ, ಸುಸಂಸ್ಕೃತ ಮಹಿಳೆಯಾಗಿ ತನ್ನ ವ್ಯಕ್ತಿತ್ವ ಬೆಳೆಸಿಕೊಳ್ಳಲು ತಕ್ಕ ಬುನಾದಿ ಒದಗಿಸಿತ್ತು.

1939 ರಲ್ಲಿ ಮೆಟ್ರಿಕ್ ಮುಗಿಸಿ 1947ರಲ್ಲಿ ಗಣಿತದ ಆನರ್ಸ್ ಪದವಿಯನ್ನು ಪಡೆದರು. ಆಗ ಧಾರವಾಡದಲ್ಲಿ ಕಾಲೇಜಿಗೆ ಹೆಣ್ಣುಮಕ್ಕಳನ್ನು ಕಳುಹಿಸುತ್ತಿದ್ದ ಕೇವಲ ಮೂರು ಕುಟುಂಬಗಳಲ್ಲಿ ಅವರ ಮನೆ ಒಂದಾಗಿತ್ತು. ಬಾಲ್ಯದಿಂದಲೂ ಚರ್ಚಾಕೂಟಗಳಲ್ಲಿ, ಭಾಷಣ ಕಾರ್ಯಕ್ರಮಗಳಲ್ಲಿ ತಂದೆಯ ಪ್ರೋತ್ಸಾಹದೊಂದಿಗೆ ಭಾಗವಹಿಸುತ್ತಿದ್ದುದು ಇಂದಿರಾಗೆ ಬೌದ್ಧಿಕ, ಮಾನಸಿಕ ಪ್ರಬುದ್ಧತೆ ನೀಡಿತ್ತು. 1943ಕ್ಕೇ ವಕೀಲ ಕೇಶವರಾವ್ ಜೊತೆ ವಿವಾಹ ಆಗಿತ್ತು.

ಪತಿಗೆ ಖಾಯಿಲೆಯಾದಾಗ ಹಸುಗೂಸನ್ನು ತಾಯಿಯೊಂದಿಗೆ ಕಳುಹಿಸುವ ಗಟ್ಟಿಮನಸ್ಸು ಮಾಡಿ ಗಂಡನ ಶುಶ್ರೂಷೆಗೆ ಟೊಂಕಕಟ್ಟಿ ನಿಂತರು. ಖಾಯಿಲೆ ಮತ್ತೆ ಮತ್ತೆ ಮರುಕಳಿಸುತ್ತಿದ್ದರೂ, ಅಳುಕದೆ ತಕ್ಕ ಚಿಕಿತ್ಸೆ ಕೊಡಿಸಲೇಬೇಕೆಂದು ಸ್ವತಃ ಕೆಲಸಕ್ಕೆ ಸೇರಲು ನಿರ್ಧರಿಸಿದರು. ಧಾರವಾಡದಲ್ಲಿ ಹೆಣ್ಣುಮಕ್ಕಳ ತರಬೇತಿ ಕಾಲೇಜಿನಲ್ಲಿ ಶಿಕ್ಷಕಿಯಾಗಿ ವೃತ್ತಿಜೀವನ ಆರಂಭಿಸಿದರು. ಸಮಯದ ಅನುಕೂಲ ನೋಡಿ ನರ್ಸರಿ ತರಬೇತಿ, ಹಿಂದೀ ಶಿಕ್ಷಕ ತರಬೇತಿ, ಸಮಾಜಕಲ್ಯಾಣ ತರಬೇತಿ ಮುಂತಾದ ಹಲವಾರು ಹೆಚ್ಚಿನ ವಿದ್ಯಾರ್ಹತೆಗಳನ್ನು ಪಡೆದುಕೊಂಡರು. ಜೊತೆಗೆ ಆಕ್ಸಿಲರಿ ಕೆಡೆಟ್ ಕೋರ್ಸ್‌ಗೂ ಹಾಜರಾದರು. ನಲವತ್ತೂರರ ವಯಸ್ಸಿನಲ್ಲಿ ಹೊರವಿದ್ಯಾರ್ಥಿನಿಯಾಗಿ ಗಣಿತದ ಎಂ.ಎ ಮಾಡಿದರು. ನಂತರ ಬೆಳಗಿನ ತರಗತಿಗಳಿಗೆ ಹಾಜರಾಗಿ ಎಂ.ಎಡ್ ಮಾಡಿದ್ದು ಅವರ ಕ್ರಿಯಾಶೀಲತೆಗೂ, ಬಲವಾದ ಆತ್ಮಸ್ಥೈರ್ಯಕ್ಕೂ ಸಾಕ್ಷಿ. ಆರೋಗ್ಯ ಸುಧಾರಿಸಿದ್ದಾಗ ವಕೀಲವೃತ್ತಿ ನಡೆಸುತ್ತಿದ್ದರೂ ಕೇಶವರಾವ್‌ಗೆ ಇಂದಿರಾ ಅವರ ಭದ್ರ ಸಹಾಯಹಸ್ತದ ಅಗತ್ಯವಿತ್ತು. ಅದನ್ನು ಧಾರಾಳವಾಗಿ ನೀಡುತ್ತ ಮಕ್ಕಳ ಲಾಲನೆ, ಪಾಲನೆ, ಉತ್ತಮ ಶಿಕ್ಷಣದ ವ್ಯವಸ್ಥೆ ಎಲ್ಲದರಲ್ಲಿ ಗಂಡನಿಗೆ ಸಹಕರಿಸಿದ್ದರು ಇಂದಿರಾ.

ಸುಮಾರು 20 ವರ್ಷಗಳವರೆಗೆ ಸರ್ಕಾರಿ ಹೈಸ್ಕೂಲ್, ಸೋಷಿಯಲ್ ವೆಲ್‌ಫೇರ್ ಟ್ರೈನಿಂಗ್ ಸೆಂಟರ್, ನರ್ಸರಿ ಟ್ರೈನಿಂಗ್ ಸೆಂಟರ್, ಹಿಂದಿ ಶಿಕ್ಷಕರ ತರಬೇತಿ ಕೇಂದ್ರಗಳಲ್ಲಿ ಕೆಲಸ ಮಾಡಿ ಹೈಸ್ಕೂಲ್ ಮತ್ತು ಪಿ.ಯು ತರಗತಿಗಳಿಗೆ ಗಣಿತ ವಿಷಯದ ಪರಿವೀಕ್ಷಕರಾಗಿ ಹಲವು ಹುದ್ದೆಗಳನ್ನು ನಿರ್ವಹಿಸಿ ವೃತ್ತಿಜೀವನದಲ್ಲಿ ಕೂಡ ಯಶಸ್ವಿಯಾದರು. ಸಾಹಿತ್ಯಿಕ ಚಟುವಟಿಕೆಯನ್ನು ಕೂಡ ತಮ್ಮ ಹವ್ಯಾಸವಾಗಿ ಮಾಡಿಕೊಂಡರು. ಶಿಕ್ಷಣಕ್ಷೇತ್ರದ ಹಲವು ವಾರ್ತಾಪತ್ರಗಳ ಹಾಗೂ ಕೆಲವು ನಿಯತ ಕಾಲಿಕೆಗಳಲ್ಲಿ ಹೆಣ್ಣುಮಕ್ಕಳಿಗೆ ಶಿಕ್ಷಣ, ಸ್ವಾತಂತ್ರ್ಯ ಹೋರಾಟಗಾರರ ಪರಿಶ್ರಮ, ಸಾಧನೆ, ಹೆಣ್ಣುಮಕ್ಕಳಿಗೆ ಉದ್ಯೋಗದ ಅವಶ್ಯಕತೆ ಇತ್ಯಾದಿ ವಿಷಯಗಳನ್ನು ಕುರಿತು ಬರೆಯುತ್ತಿದ್ದ ಲೇಖನಗಳು, ರೇಡಿಯೋ ಭಾಷಣಗಳು ಅವರ ಪ್ರತಿಭೆಯ ಮತ್ತೊಂದು ಸ್ವರೂಪದ ಪರಿಚಯ ನೀಡುತ್ತವೆ.

'ಸುಶಿಕ್ಷಿತೆ' ಎಂಬ ಕಿರುಕಾದಂಬರಿ, 'ರಮಾ' ಎಂಬ ಮಿನಿ ಕಾದಂಬರಿ, ಪ್ರವಾಸಕಥನ, ಹಲವು ಬಿಡಿ ಲೇಖನಗಳು, ಶ್ರೀ ಗುರುದೇವ ರಾನಡೆ ಟ್ರಸ್ಟ್‌ನವರ ಮರಾಠಿ ಭಾಷೆಯ ನಿತ್ಯನೇಮಾವಲಿಯ ಕನ್ನಡಾನುವಾದ, ಘಟಪ್ರಭಾದ 'ಕರ್ನಾಟಕ ಆರೋಗ್ಯಧಾಮ'ದ ರೂವಾರಿ ಡಾ॥ ಮಾಧವ್‌ರಾವ್ ವೈದ್ಯರ ಪತ್ನಿಯಾದ ವತ್ಸಲಾ ವೈದ್ಯರನ್ನು ಕುರಿತು ಮರಾಠಿಯಲ್ಲಿ ಇಂದುಮತಿ ಕೇಳ್ಕರ್ ಬರೆದ 'ವತ್ಸಲಾ' ಕಾದಂಬರಿಯ ಕನ್ನಡಾನುವಾದ ಹೀಗೆ ಹತ್ತಾರು ಬಗೆಯ ಸಾಹಿತ್ಯಕೃತಿಗಳನ್ನು ರಚಿಸಿದ್ದಾರೆ.

ಸಮಾಜಸೇವೆಯಲ್ಲಿ ತೊಡಗಿಕೊಂಡಿದ್ದ ವೈದ್ಯೆ ವತ್ಸಲಾರನ್ನು ಇಂದಿರಾ ಕಂಡದ್ದು ಪತಿಯನ್ನು ಕ್ಷಯರೋಗ ಚಿಕಿತ್ಸೆಗೆ ಘಟಪ್ರಭಾಗೆ ಕರೆದೊಯ್ದಾಗ. ಒಂದು ಕಡೆ ಪತಿಗೆ ಚಿಕಿತ್ಸೆ ನಡೆಯುತ್ತಿದ್ದರೆ, ಇಂದಿರಾ ತಮ್ಮ ಸಮಯವನ್ನು ವ್ಯರ್ಥಗೊಳಿಸದೆ ವತ್ಸಲಾರೊಡನೆ ಹಳ್ಳಿಗಳಿಗೆ ಭೇಟಿ ನೀಡುವುದರಲ್ಲಿ ಅವರು ನಡೆಸುತ್ತಿದ್ದ ಸೇವಾವಿಧಾನದ ಪರಿಚಯ ಮಾಡಿಕೊಳ್ಳುವುದರಲ್ಲಿ ಕಳೆಯುತ್ತಿದ್ದರು. ಅಲ್ಲಿನ ಶಾಲೆಗಳಲ್ಲಿದ್ದ ತರಬೇತಿ ಪಡೆಯದ ಶಿಕ್ಷಕರಿಗೆ ತಾವೇ ತರಬೇತಿ ನೀಡುವ ಹೊಣೆ ನಿರ್ವಹಿಸುತ್ತಿದ್ದರು. ಆಸ್ಪತ್ರೆಯ ಮಲೆಯಾಳಿ ನರ್ಸ್ ಗಳಿಗೆ ಕನ್ನಡ, ಇಂಗ್ಲೀಷ್ ಕಲಿಸುತ್ತಿದ್ದರು. ಅಲ್ಲಿ ಸ್ಥಾಪಿಸಿದ್ದ ಮಹಿಳಾ ಮಂಡಳಿಗಳಿಗೆ ತಾವೂ ಹೋಗಿ ಸ್ತ್ರೀ ಜಾಗೃತಿಯ ಮಹತ್ವವನ್ನು, ಸ್ವಾವಲಂಬನೆಯ ಅಗತ್ಯವನ್ನು ವಿವರಿಸಿ ಅರಿವು ಮೂಡಿಸುತ್ತಿದ್ದರು.

ಸುಮಾರು ಏಳು ದಶಕಗಳ ಹಿಂದೆ ಮದುವೆಯಾಗಿ ತಿಂಗಳಲ್ಲೇ ಗಂಡನಿಗೆ ಕ್ಷಯರೋಗವೆಂದು ತಿಳಿದಾಗ ಇಂದಿರಾ ಕೇವಲ 22 ರ ತರುಣಿ. ಆದರೂ ಧೃತಿಗೆಡದೆ ಒದಗಿಬಂದ ಹತ್ತಾರು ದುರ್ಭರ ಪ್ರಸಂಗಗಳನ್ನು ಎದುರಿಸಿ ಪತಿಯನ್ನು ಅನಾರೋಗ್ಯದ ದವಡೆಯಿಂದ ಪಾರುಮಾಡುವಲ್ಲಿ ಯಶಸ್ವಿಯಾದರು. ಶಿಕ್ಷಕಿಯಾಗಿ, ಆಡಳಿತಾಧಿಕಾರಿಯಾಗಿ ಸಮಾಜ ಸುಧಾರಕಿಯಾಗಿ, ಸಾಹಿತಿಯಾಗಿ, ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಒಬ್ಬ ಪ್ರಜ್ಞಾವಂತ ಮಹಿಳೆಯಾಗಿ ಬದುಕಿದವರು ಇಂದಿರಾ ದೇಶಪಾಂಡೆ ಅವರ ಯೋಚನೆ ಸದಾಕಾಲ ಸಮಯದ ಸದುಪಯೋಗ ಹೇಗೆಂಬುದು. ●

➢ ಪುಟ 5 ರಿಂದ.....

- ಆಡಳಿತವನ್ನೇ ಅಲ್ಲಾಡಿಸುವ ಮಟ್ಟಕ್ಕೆ ಬೆಳೆದ ಮಾಫಿಯಾ ಪ್ರಭಾವ. ರಾಜಾರೋಷವಾಗಿ ನಡೆಯುತ್ತಿರುವ ಅಕ್ರಮ ಮರಳು ದಂಧೆ, ಗಾಂಜಾ–ಮಾದಕ ಮಾರಾಟ.
- ದಕ್ಷ ಪೊಲೀಸ್ ಅಧಿಕಾರಿಗಳು, ಐಎಎಸ್ ಅಧಿಕಾರಿಗಳ ಕರ್ತವ್ಯ ನಿರ್ವಹಣೆಯಲ್ಲಿ ಹಸ್ತಕ್ಷೇಪ; ಅಧಿಕಾರಿಗಳಿಗೆ ಕಿರುಕುಳ, ಹಲ್ಲೆ ಮತ್ತು ನಿರಂತರ ವರ್ಗಾವಣೆಗಳು. ದಕ್ಷ ಅಧಿಕಾರಿಗಳ ಆತ್ಮಹತ್ಯೆ.
- ಲೋಕಾಯುಕ್ತಕ್ಕೆ ಬಲವೇ ಇಲ್ಲ! ಲೋಕಾಯುಕ್ತರ ಮೇಲೆ ಹಾಡುಹಗಲೇ ಹಲ್ಲೆ!
- ಬಡವರಿಗೆ ನೀಡುತ್ತಿರುವ ಭಾಗ್ಯಗಳ ಹೆಸರಿನಲ್ಲಿ ಅಪರಿಮಿತ ಭ್ರಷ್ಟಾಚಾರ. ಯೋಜನೆಗೆ ನಿಗದಿಯಾದ ದವಸ ಧಾನ್ಯಗಳು ಕಾಳಧನಿಕರ ಪಾಲು.
- ಕಳೆದ ಐದು ವರ್ಷಗಳಲ್ಲಿ ದುಪ್ಪಟ್ಟಾಯಿತು ಸರ್ಕಾರದ ಸಾಲ! 2013ರಲ್ಲಿ ಇದ್ದ ಸಾಲ 1.18 ಲಕ್ಷ ಕೋಟಿ. 2017ರಲ್ಲಿ 2.42 ಲಕ್ಷ ಕೋಟಿ. ಇನ್ನು 2018ರ ಬಜೆಟ್ನಲ್ಲಿ ಹೇಳಿದ ಯೋಜನೆ ಜಾರಿ ಮಾಡಬೇಕೆಂದರೆ ಸಾಲ 2.86 ಲಕ್ಷ ಕೋಟಿ ತಲುಪಲಿದೆ!
- ವೀರಶೈವ–ಲಿಂಗಾಯತ ಹೆಸರಿನಲ್ಲಿ, ಟಿಪ್ಪು ಜಯಂತಿಯ ನೆಪದಲ್ಲಿ ಸಮಾಜವನ್ನು ಒಡೆಯುವ ಕುತಂತ್ರ!
- ಸಮಾಜದಲ್ಲಿ ಗಲಭೆಯೆಬ್ಬಿಸಿ ಅಶಾಂತಿಯನ್ನು ಉಂಟು ಮಾಡಿದ 175 ಪ್ರಕರಣಗಳಲ್ಲಿ ಪಾಲ್ಗೊಂಡ 1600 ಆರೋಪಿಗಳ ಮೇಲಿನ ಕೇಸ್ ವಾಪಸ್! ಮತಾಂಧ ಭಯೋತ್ಪಾದಕರನ್ನು ಮುಗ್ಧರು ಎಂದು ಹೇಳಿ ಬಿಡುಗಡೆಗೊಳಿಸುವ ಹುನ್ನಾರ.
- ಗೋಹತ್ಯಾ ನಿಷೇಧ ಕಾನೂನು ವಾಪಸ್ ಪಡೆದುಕೊಂಡಿದ್ದಲ್ಲದೇ, ದನಕಳ್ಳರಿಗೇ ಪ್ರೋತ್ಸಾಹ!
- ಅನಾದಿಕಾಲದಿಂದಲೂ ಜನರ ಶ್ರದ್ಧೆಯ ಕೇಂದ್ರಗಳಾದ ಮಠ ಮಂದಿರಗಳನ್ನು ವಶಕ್ಕೆ ಪಡೆದುಕೊಳ್ಳುವ ವಿಫಲ ಪ್ರಯತ್ನ. ಪ್ರಾಚೀನ ಧಾರ್ಮಿಕ ಆಚರಣೆಗಳನ್ನು ಮೌಢ್ಯವೆಂಬ ಹಣೆಪಟ್ಟಿ ನೀಡಿ ನಿಷೇಧಿಸುವ ಹುನ್ನಾರ.
- ನಗರಾಭಿವೃದ್ಧಿಯಲ್ಲಿ ನಿಷ್ಕಾಳಜಿ. ಬೆಂಗಳೂರಿನ ರಸ್ತೆಗಳಲ್ಲಿ ಪ್ರಾಣಘಾತಕ ಗುಂಡಿಗಳು, ಟ್ರಾಫಿಕ್ ಜ್ಯಾಮ್ ಸಮಸ್ಯೆ, ಗಬ್ಬು ನಾರುವ ಕಸದ ರಾಶಿ. ಗಾರ್ಬೇಜ್ ಸಿಟಿಯೆಂಬ ಕಳಂಕ ಹೊತ್ತ ಗ್ಲೋಬಲ್ ಸಿಟಿ ಬೆಂಗಳೂರು.
- ಸರ್ಕಾರದ ಆಡಳಿತ ವೈಖರಿಗೆ ಬೇಸತ್ತ ನಾಗರಿಕರು ಆಗಾಗ ಬೀದಿಗಿಳಿದು ಪ್ರತಿಭಟನೆ ನಡೆಸಬೇಕಾಯಿತು – ಸ್ಟೀಲ್‌ಬ್ರಿಡ್ಜ್ ಅಕ್ರಮಕ್ಕೆ ಕೆರಳಿದ ಬೆಂಗಳೂರಿಗರು. ವೈದ್ಯರು, ಪಶುವೈದ್ಯರು, ಅಂಗನವಾಡಿ, ಬಿಸಿಯೂಟ, ಆಶಾ ಕಾರ್ಯಕರ್ತೆಯರು, ನೀರು ಕೇಳಿದ ರೈತರು ಇನ್ನೂ ಅನೇಕರ ಸಮಸ್ಯೆಗಳಿಗೆ ಸರ್ಕಾರದ ಸ್ಪಂದನವೇ ಇಲ್ಲ. ಕಡೆಗೆ ಬೀದಿಗಿಳಿದು ಪ್ರತಿಭಟನೆಗೆ ಇಳಿಯುವುದೊಂದೇ ಮಾರ್ಗವಾಗಬೇಕಾಯಿತು.
- ಬೆಳೆಹಾನಿ ಹಾಗೂ ಸಾಲಬಾಧೆ ತಾಳಲಾರದೇ ಶರಣಾದ ರಾಜ್ಯದ ರೈತರು. 2013 ರಿಂದ 2018ರ ಫೆಬ್ರುವರಿಯವರೆಗೆ ರಾಜ್ಯದಲ್ಲಿ 3800 ರೈತರು!
- ನೀರು ಕೇಳಿದ ರೈತರ ಮೇಲೆ ಅಮಾನವೀಯವಾಗಿ ಲಾಠಿಚಾರ್ಜ್! ನವಲಗುಂದ ಯಮಲೂರಿನ ಕೃಷಿಕರ ಮೇಲೆ ಮುದುಕರು ಮಕ್ಕಳು ಮಹಿಳೆಯರೆಂದು ನೋಡದೆ ಬಾಸುಂಡೆ ಬರುವಂತೆ ಬೆತ್ತ ಬೀಸಿದ್ದು, ಬೆಂಗಳೂರಿಗೆ ನೀರು ಕೇಳಿ ಬಂದ ಕೋಲಾರದ ರೈತರ ಮೇಲೆ ಲಾಠಿಚಾರ್ಜ್ ಮಾಡಿದ್ದನ್ನು ರಾಜ್ಯ ಮರೆತಿಲ್ಲ.
- ಎಲ್ಲಿ ನೋಡಿದರಲ್ಲಿ ಅಭಿವೃದ್ಧಿಯ ಹೆಸರಿನ ಹಗರಣಗಳು, ಭ್ರಷ್ಟಾಚಾರ, ದುರಾಡಳಿತ, ಸ್ವಜನ ಪಕ್ಷಪಾತ, ಗೂಂಡಾ ದರ್ಬಾರ್.
- ಹೆಚ್ಚುತ್ತಿರುವ ಪಿಎಫ್‌ಐ, ಕೆಎಫ್ಡಿ ಇತ್ಯಾದಿ ಮತಾಂಧ ಸಂಘಟನೆಗಳ ಚಟುವಟಿಕೆಗಳಿಗೆ ತಡೆಹಾಕದೇ ಪ್ರೋತ್ಸಾಹಿಸುತ್ತಿರುವ ಕಾರ್ಯ ಆಡಳಿತ ಪಕ್ಷದಿಂದಲೇ ನಡೆಯುತ್ತಿದೆ.
- ರಾಜ್ಯದಾದ್ಯಂತ ಹರಡಿ ನೆಲೆ ಕಂಡುಕೊಂಡಿರುವ ಬಾಂಗ್ಲಾದೇಶಿ ಅಕ್ರಮ ನುಸುಳುಕೋರರಿಂದ ರಾಷ್ಟ್ರೀಯ ಸುರಕ್ಷತೆ, ಜನಸಾಮಾನ್ಯರ ರಕ್ಷಣೆ ಭೀತಿಯಲ್ಲಿದೆ. ಆದರೂ ಅವರನ್ನು ಗುರುತಿಸಿ ಹೊರಹಾಕುವಲ್ಲಿ ರಾಜ್ಯ ಸರ್ಕಾರ ನಿಷ್ಕ್ರಿಯತೆಯನ್ನು ಪ್ರದರ್ಶಿಸುತ್ತಿದೆ.
- ನಿರಂತರ ಮುಂದುವರಿದ ಹಿಂದೂ ಕಾರ್ಯಕರ್ತರ ಹತ್ಯೆ – ಈವರೆಗೆ 24 ಹತ್ಯೆಗಳು!

ಮುಂದಿನ ಐದು ವರ್ಷಗಳ ರಾಜ್ಯದ ಆಡಳಿತವನ್ನು ಯಾರು ಮುನ್ನಡೆಸಬೇಕು ಎಂದು ನಿರ್ಧರಿಸಬೇಕಾದ ಸಮಯ ಮತ್ತೆ ನಮ್ಮ ಮುಂದೆ ಬಂದಿದೆ. ನಮ್ಮ ಕ್ಷೇತ್ರವನ್ನು ಪ್ರತಿನಿಧಿಸಬೇಕಾದ ಅಭ್ಯರ್ಥಿಯನ್ನು ಆರಿಸುವುದರ ಜೊತೆಗೆ ರಾಜ್ಯದಲ್ಲಿ ಸರ್ಕಾರವನ್ನು ರಚಿಸಲು ಪಕ್ಷವನ್ನು ಚುನಾಯಿಸುವ ಸವಾಲೂ ಸಹ ನಮ್ಮ ಮುಂದೆ ಈಗ ಎದುರಾಗಿದೆ. ನಮ್ಮ ಕ್ಷೇತ್ರದಿಂದ ಉತ್ತಮ ಅಭ್ಯರ್ಥಿಯನ್ನು ಚುನಾಯಿಸುವ ಕರ್ತವ್ಯ ನಮಗಿರುವಂತೆ ರಾಜ್ಯಹಿತದ ದೃಷ್ಟಿಯಲ್ಲಿ ಒಂದು ಕೆಟ್ಟ ರಾಜಕೀಯ ಪಕ್ಷದ ಕೈಗೆ ಅಧಿಕಾರ ನೀಡದೇ ಇರುವ ಜವಾಬ್ದಾರಿಯೂ ನಮಗಿದೆ. ●

**ಕೇಂದ್ರ ಸರ್ಕಾರದ ಮಹಾತ್ವಾಕಾಂಕ್ಷೆ ಯೋಜನೆಯಾದ ಸ್ವಚ್ಛ ಭಾರತ್ ಯೋಜನೆಯು ಭಾರತಾದ್ಯಂತ ವಿಶೇಷ ಜನಮನ್ನಣೆ ಗಳಿಸಿದ ಯೋಜನೆಯಾಗಿದೆ. ಕೋಟ್ಯಾಂತರ ಜನರು ಈ ಕೆಲಸದಲ್ಲಿ ಸ್ವಇಚ್ಛೆಯಿಂದ ಭಾಗಿಗಳಾಗುತ್ತಿದ್ದಾರೆ. ಆದರೆ ಇಲ್ಲೊಂದು ವಿಶೇಷವೆಂದರೆ ಡಾ॥ ಮೇಘಾ ಮಹಾಜನ್ ಈ ಯೋಜನೆಗೆ ಧನ ಸಹಾಯ ನೀಡಿ ಬೆಂಬಲ ಕೊಡುವುದರ ಮೂಲಕ ದೇಶದೆಲ್ಲೆಡೆ ಸುದ್ದಿಯಾಗಿದ್ದಾರೆ. ಇವರು ದಂತ ವೈದ್ಯೆಯಾಗಿದ್ದು ಮೂಲತಃ ಜಮ್ಮುವಿನ ಮಹಿಳೆ. 2011ರಲ್ಲಿ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದರು. ಇತ್ತೀಚೆಗೆ ಅದರ ಅಂತಿಮ ತೀರ್ಪು ಬಂದಿತ್ತು. ಅದರಂತೆ ಅವರಿಗೆ ಜೀವನಾಂಶವಾಗಿ ಬಂದಿದ್ದ 45 ಲಕ್ಷ ರೂ.ಗಳ ಸಂಪೂರ್ಣ ಹಣವನ್ನು ಸ್ವಚ್ಛ ಭಾರತ್ ಯೋಜನೆಗೆ ದೇಣಿಗೆಯಾಗಿ ನೀಡಿದ್ದಾರೆ.**

**ಮೋದಿಯವರ ನೇತೃತ್ವದಲ್ಲಿ ದೇಶ ಅಭಿವೃದ್ಧಿಯ ಹಾದಿ ಹಿಡಿದಿದೆ. ಆದ್ದರಿಂದಲೇ ಮೋದಿಯವರ ಕನಸಿನ ಯೋಜನೆಯಾದ ಈ ಅಭಿಯಾನಕ್ಕೆ ಈ ಹಣ ಅರ್ಪಿಸಿದ್ದೇನೆ ಎಂದು ಅವರು ಹೇಳಿದ್ದಾರೆ. ಅವರ ಈ ಸೇವಾ ಮನೋಭಾವ ಎಲ್ಲೆಡೆ ಜನಮನ್ನಣೆ ಪಡೆದಿದೆ.**

➢ ಪುಟ 6 ರಿಂದ..... ಸಂಘದ ವಾರ್ತೆ

# ಯುಗಾದಿ ಹೊಸವರ್ಷದ ಪಾಕೆಟ್ ಕ್ಯಾಲೆಂಡರ್ ಬಿಡುಗಡೆ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾಘಟಕ ಒಟ್ಟಾಗಿ ಏರ್ಪಡಿಸಿದ್ದ ಯುಗಾದಿ ನೂತನ ವರ್ಷದ ಶಿಕ್ಷಕ ಸಂಘದ ಪಂಚಾಂಗ (ಕ್ಯಾಲೆಂಡರ್) ವನ್ನು ದಿನಾಂಕ 04.04.2018 ರಂದು ಸಂಘದ ಕಾರ್ಯಾಲಯದಲ್ಲಿ ಶ್ರೀ ಕೃ. ನರಹರಿಯವರು ಮತ್ತು ವೇದಿಕೆಯ ಮೇಲೆ ಉಪಸ್ಥಿತರಿದ್ದ ಗಣ್ಯರು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಶಿಕ್ಷಕ ಸಂಘದ ಪೋಷಕರಾದ ಹಾಗೂ ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಶ್ರೀ ಹೆಚ್ ನಾಗಭೂಷಣ ರಾವ್‌ರವರು ಯುಗಾದಿ, ಭಾರತೀಯ ಕಾಲಮಾನದ ಪ್ರಕಾರ ನೂತನ ವರ್ಷದ ಮಹತ್ವ ಮತ್ತು ವೈಜ್ಞಾನಿಕ ಹಿನ್ನೆಲೆಯನ್ನು ವಿವರಿಸಿದರು.

ಮತ್ತೋರ್ವ ಅತಿಥಿಗಳಾದ ಶ್ರೀ ಬಸವರಾಜ್, ತುಮಕೂರು ವಿಭಾಗದ ಶಿಕ್ಷಕ ಸಂಘದ ಪ್ರಮುಖರು ಮಾತನಾಡುತ್ತಾ ಸಂಘದ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಾಗೂ ಸಮಾಜ ಸೇವೆಗಳಲ್ಲಿ ಶಿಕ್ಷಕರ ಪಾತ್ರದ ಕುರಿತು ಮಾತನಾಡಿದರು. ರಾಜ್ಯ ಖಜಾಂಚಿಗಳಾಗದ ಜೆ.ಎಂ ಜೋಷಿಯವರು ಪ್ರಾಸ್ತಾವಿಕ ನುಡಿಗಳಲ್ಲಿ ಸಂಘದ ಕಾರ್ಯ ಚಟುವಟಿಕೆಗಳ ಕುರಿತು ವಿವರಿಸಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶ್ರೀ ಕೃ. ನರಹರಿಯವರು ಶಿಕ್ಷಕ ಸಂಘ ಶಿಕ್ಷಕರಲ್ಲಿ, ವಿದ್ಯಾರ್ಥಿಗಳಲ್ಲಿ ಹಾಗೂ ಸಮಾಜದಲ್ಲಿ ನೈಜ ರಾಷ್ಟ್ರಪ್ರೇಮ ಬೆಳೆಸುವಂತೆ ಕರೆ ನೀಡಿದರು.

ಸಂಘದ ಉತ್ತರ ಜಿಲ್ಲಾ ಅಧ್ಯಕ್ಷರಾದ ಎಸ್ ಜಿ ತಾಂಬೆ ಮುಖ್ಯ ಅತಿಥಿಗಳನ್ನು ಕಾರ್ಯಕ್ರಮಕ್ಕೆ ಸ್ವಾಗತಿಸಿದರು. ಕ್ಯಾಲೆಂಡರ್‌ಗೆ ಜಾಹಿರಾತು ನೀಡಿದ ದಾನಿಗಳಿಗೆ ದಕ್ಷಿಣ ಜಿಲ್ಲೆಯ ಅಧ್ಯಕ್ಷರಾದ ಬಿ.ಎ ಸುರೇಂದ್ರರವರು ಕೃತಜ್ಞತೆ ಸಲ್ಲಿಸಿದರು. ಹಾಗೂ ಕಾರ್ಯದರ್ಶಿಗಳಾದ ಶ್ರೀಮತಿ ವಾಸುಕಿರವರು ನಿರೂಪಣೆ ಮಾಡಿದರು. ಬೆಂಗಳೂರು ಉತ್ತರ ಜಿಲ್ಲಾ ಕಾರ್ಯದರ್ಶಿಗಳಾದ ಗಂಗಪ್ಪನವರು ಸಭಿಕರಿಗೆ ವಂದಿಸಿದರು. 50ಕ್ಕೂ ಹೆಚ್ಚು ಶಿಕ್ಷಕರು ಹಾಗೂ ಸಂಘದ ಕಾರ್ಯಕರ್ತರು ಈ ಸಮಾರಂಭದಲ್ಲಿ ಭಾಗವಹಿಸಿದ್ದರು.

ವರದಿ : ಶ್ರೀ ಎಸ್.ಜಿ ತಾಂಬೆ, ಬೆಂಗಳೂರು ಉತ್ತರ ಜಿಲ್ಲಾ ಅಧ್ಯಕ್ಷರು

**ನಂಬಲಸಾಧ್ಯವಾದ ವಿಷಯವಿದು! ಆದರೂ ಅಕ್ಷರಶಹಃ ಸತ್ಯವಾದದ್ದು. ಐನ್ ಸ್ಟೀನ್, ಹಾಕಿಂಗ್‌ಗಿಂತಲೂ ಹೆಚ್ಚಿನ ಐಕ್ಯು ಹೊಂದಿದ್ದಾನಂತೆ, ಅದು ನಮ್ಮ ಭಾರತೀಯ ಬಾಲಕ.**

**ಹೌದು; 11 ವರ್ಷದ ಭಾರತೀಯ ಮೂಲದ ಇಂಗ್ಲೆಂಡ್ ನಿವಾಸಿ ಅರ್ಣವ್ ಶರ್ಮಾ ಅಲ್ಬರ್ಟ್ ಐನ್‌ಸ್ಟೀನ್ ಮತ್ತು ಸ್ಟೀಫನ್ ಹಾಕಿಂಗ್ ಅವರಿಗಿಂತಲೂ ಹೆಚ್ಚಿನ ಬೌದ್ಧಿಕ ಮಟ್ಟವನ್ನು ಹೊಂದಿದ್ದಾನೆ.**

**ಎಐಆರ್ ನ್ಯೂಸ್ ಪ್ರಕಾರ ಮೆನ್ಸಾ ಐಕ್ಯೂ ಪರೀಕ್ಷೆಯಲ್ಲಿ ಶರ್ಮಾ 162 ಅಂಕಗಳನ್ನು ಪಡೆದುಕೊಂಡಿದ್ದು ಇದು ಐನ್‌ಸ್ಟೀನ್ ಮತ್ತು ಹಾಕಿಂಗ್‌ಗಿಂತ 2 ಪಾಯಿಂಟ್ ಜಾಸ್ತಿಯಾಗಿದೆ.**

➢ ಪುಟ 7 ರಿಂದ..... ಭಾರತೀಯ ಭಾಷೆ...

ಸಂಸ್ಥೆಗಳಿಗೆ, ಮಾಧ್ಯಮಗಳಿಗೆ, ವಿವಿಧ ಸಮುದಾಯದ ಮುಖಂಡರಿಗೆ, ಶೈಕ್ಷಣಿಕ ಸಂಸ್ಥೆಗಳಿಗೆ, ವಿದ್ವಾಂಸರಿಗೆ ಭಾರತೀಯ ಭಾಷೆಗಳನ್ನು ಅಸ್ಖಲಿತವಾಗಿ, ವ್ಯಾಕರಣಬದ್ಧವಾಗಿ ಬಳಸಿ ಅದರಲ್ಲಿನ ವಿಶೇಷಪದಪುಂಜಗಳನ್ನು, ಸಾಹಿತ್ಯವನ್ನು ಪ್ರೋತ್ಸಾಹಿಸುವ ದಿಕ್ಕಿನಲ್ಲಿ ಕಾರ್ಯನಿರ್ವಹಿಸಬೇಕೆಂದು ಆಗ್ರಹಿಸುತ್ತದೆ.

## ನಾವೇನು ಮಾಡಬಹುದು?

ಸ್ವಭಾಷಾ ಜಾಗೃತಿ ಮತ್ತು ಮಾತೃಭಾಷೆ ಅಥವಾ ರಾಜ್ಯ ಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ನಿರ್ಣಯವನ್ನು ನಾವು ಕಾರ್ಯರೂಪಕ್ಕೆ ತರುವುದು ಹೇಗೆ?

**ವೈಯುಕ್ತಿಕ ನೆಲೆಯಲ್ಲಿ**

1. ಕನ್ನಡದಲ್ಲೇ ಹಸ್ತಾಕ್ಷರ ಮಾಡುವುದು
2. ಕನ್ನಡದಲ್ಲಿ ಪತ್ರ ವ್ಯವಹಾರ ನಡೆಸುವುದು
3. ಮನೆಯಲ್ಲಿ ಕನ್ನಡ ವಾತಾವರಣ ಇಡುವುದು
4. ಕನ್ನಡ ಅಂಕಿಗಳ ಕಲಿಕೆ ಹಾಗೂ ಬಳಕೆ ಮಾಡುವುದು
5. ಕನ್ನಡ ಪುಸ್ತಕಗಳನ್ನು ಕೊಂಡು ಓದುವುದು
6. ನಮ್ಮ ಮನೆಗೆ ಕನ್ನಡ ಪತ್ರಿಕೆಗಳನ್ನು ತರಿಸುವುದು
7. ಪರಸ್ಪರ ಮಾತನಾಡುವಾಗ ಕನ್ನಡದಲ್ಲಿ ಮಾತಕತೆ ನಡೆಸುವುದು, ಸಾಧ್ಯವಾದಷ್ಟು ಇಂಗ್ಲೀಷ್ ಶಬ್ದಗಳನ್ನು ಬಳಸದಿರುವುದು.
8. ಥ್ಯಾಂಕ್ಯೂ, ಸಾರಿ ಇತ್ಯಾದಿ ಪದೇ ಪದೇ ಬಳಸುವ ಶಬ್ದದ ಬದಲಿ 'ಧನ್ಯವಾದ' 'ಕ್ಷಮಿಸಿ' ಎಂಬ ಪದಗಳನ್ನು ಬಳಸಬಹುದಲ್ಲವೇ? ●

**ಈಗಿನ ಶಿಕ್ಷಣ ಕೇವಲ ಪ್ರಮಾಣ ಪತ್ರ ಹಾಗೂ ದುಡಿಮೆಗಾಗಿ ಮಾತ್ರ ಎಂಬಂತಾಗಿದ್ದು, ದೇಶಪ್ರೇಮ, ಗುರುಹಿರಿಯರಲ್ಲಿ ಗೌರವ, ಸಂಸ್ಕಾರ ತುಂಬುವಲ್ಲಿ ಸಾಧ್ಯವಾಗುತ್ತಿಲ್ಲ. ಇಂತಹ ವಾತವರಣ ವಿರುವ ಕಾಲದಲ್ಲಿ ವಿಶೇಷ ವ್ಯಕ್ತಿತ್ವವಿರುವ ಅಪರ್ಣಾ ಮೂಲತಃ ವಾರಣಾಸಿಯ ವ್ಯಾಪರಸ್ಥ ಕುಟುಂಬದಿಂದ ಬಂದವರು. ಹೆಚ್ಚು ಸಂಬಳ ಬರುವ ಕೆಲಸದಲ್ಲಿದ್ದರೂ ಕೆಲಸ ತೊರೆದು ದೇಶಸೇವೆ ಮಾಡಬೇಕೆಂಬ ಮಹತ್ವಾಕಾಂಕ್ಷೆ ಉಳ್ಳವರು. ಆದ್ದರಿಂದಲೇ ಸೈನ್ಯ ಸೇರಿದರು. ಬಾಲ್ಯದಿಂದಲೇ ಪ್ರತಿಭಾವಂತೆಯಾಗಿದ್ದು, ಕಾಶ್ಮೀರದಲ್ಲಿ ಇಂಜಿನಿಯರಿಂಗ್ ಪದವಿ ಪಡೆದು ಅಮೆರಿಕಾ ಮೂಲದ ಬಹುರಾಷ್ಟ್ರೀಯ ಕಂಪನಿಯಲ್ಲಿ ಹೆಚ್ಚು ಸಂಬಳ ಬರುವ ಹುದ್ದೆಗೆ ಆಯ್ಕೆಯಾಗಿದ್ದರು. ಹೀಗಿದ್ದರೂ ಸೇನೆಗೆ ಸೇರಲು ಉತ್ಸುಕರಾಗಿದ್ದರು. 2016ರಲ್ಲಿ ತಮ್ಮ ಕೆಲಸವನ್ನು ತೊರೆದು 2017 ರಲ್ಲಿ ಅಲಹಾಬಾದಿನಲ್ಲಿ ನಡೆದ ಎಸ್ ಎಸ್ ಬಿ ಪರೀಕ್ಷೆ ಯಲ್ಲಿ ಉತ್ತೀರ್ಣರಾಗಿದ್ದಾರೆ. ಕಳೆದ ಮಾರ್ಚ್ 10 ರಂದು ಚೆನ್ನೈನಲ್ಲಿ ಭಾರತೀಯ ಸೇನೆಯಲ್ಲಿ ಲೆಫ್ಟಿನೆಂಟ್ ಆಗಿ ನಿಯುಕ್ತಿ ಗೊಂಡಿರುತ್ತಾರೆ. ತಮ್ಮ ಈ ದೃಢ ನಿರ್ಧಾರಕ್ಕೆ ತನ್ನ ತಾಯಿಯೇ ಪ್ರೇರಣೆ ಎನ್ನುತ್ತಾರೆ. ಸೈನ್ಯ ಸೇರಲು ಬಡತನ ಕಾರಣವಲ್ಲ ದೇಶಪ್ರೇಮ ಕಾರಣ ಎಂಬುದು ಮತ್ತೊಮ್ಮೆ ಖಚಿತವಾಗಿದೆ.**

# ಗುರುಕುಲಕ್ಕೆ 24




'ವ್ಯಕ್ತಿಯೊಳಗಿನ ದೈವತ್ವವನ್ನು ಹೊರತರುವುದೇ ನಿಜವಾದ ಶಿಕ್ಷಣ' ಎಂಬ ಮೂಲಚಿಂತನೆಗೆ ಇಂದಿನ ದಿನಗಳಲ್ಲಿ ಹೆಚ್ಚಿನ ಮಹತ್ವ ದೊರೆಯುತ್ತಿದೆ. ಪುಸ್ತಕಗಳ ಹೊರೆ, ಮನೆಪಾಠದ ಒತ್ತಡ, ಅತಿ ಹೆಚ್ಚು ಅಂಕ ಗಳಿಸಲೇಬೇಕೆಂಬ ಆಗ್ರಹ, ಮತ್ತೊಬ್ಬರೊಡನೆ ಅನಾವಶ್ಯಕ ಹೋಲಿಕೆ ಮಾಡಿಕೊಂಡು ಮೇಲರಿಮೆ ಅಥವಾ ಕೀಳರಿಮೆಯ ತಾಪತ್ರಯಗಳು, ಮತ್ತೊಂದು ಮನೆಯ ಮಗುವಿನ ನಕಲು ಪ್ರತಿಯಂತೆ ತನ್ನ ಮಗುವೂ ಆಗಬೇಕೆಂಬ ಪೋಷಕರ ಹಂಬಲ? ಇವೆಲ್ಲವುಗಳನ್ನು ಇಂದು ಬಹುತೇಕ ಎಲ್ಲೆಡೆ ಕಾಣುತ್ತಿದ್ದೇವೆ. ಗುರುಸ್ಥಾನಕ್ಕೆ ಅತ್ಯಂತ ಹೆಚ್ಚು ಮಹತ್ವ ನೀಡಿದ ಭಾರತದಲ್ಲಿ ಕ್ರಮೇಣ 'ಬೇರಾವುದೇ ಉದ್ಯೋಗ ದೊರೆಯದಿದ್ದರೆ ಶಿಕ್ಷಕರಾಗೋಣ' ಎಂಬ ವಿಚಿತ್ರಭಾವ ಕಾಡತೊಡಗಿತು. ಗುಣನಿರ್ಮಾಣಕ್ಕಿಂತ ಹಣಸಂಪಾದನೆಗೆ ಗಮನ ಹರಿದು ಮಕ್ಕಳನ್ನರಳಿಸುವ ಪ್ರವೃತ್ತಿ ಆಗಬೇಕಿದ್ದ ಗುರುಸ್ಥಾನ 'ವೃತ್ತಿ' ಎಂದಾಗಿಹೋಯಿತು. ಇದೆಲ್ಲದರ ಪರಿಣಾಮ ಶಾಲೆಯೆಂಬ ವಿದ್ಯಾಲಯ ಉದ್ಯೋಗಗಳಿಸಲು ಪ್ರಮಾಣಪತ್ರ ಪಡೆಯುವ ಕಾರ್ಯಾಲಯವಾಗಿ ಹೋಯಿತೇ? ಎಂದೆನಿಸತೊಡಗಿದೆ. ಶಿಕ್ಷಣಕ್ಷೇತ್ರ ಬಹುವಿಧ ಸಮಸ್ಯೆಗಳಿಂದ ನರಳತೊಡಗಿದೆ.



ಆಧುನಿಕ ಶಿಕ್ಷಣದ ನೆಪದಲ್ಲಿ ಭಾರತೀಯರನ್ನು ಅಭಾರತೀಯರನ್ನಾಗಿಸಲು ಸಂಚುಹೂಡಿದ ಮೆಕಾಲೆ ಪದ್ಧತಿಯ ದುಷ್ಫಲವಿದು. ಸ್ವಾತಂತ್ರ್ಯಾನಂತರ ಮಾರ್ಕ್ಸ್ ಪ್ರಣೀತ ತಥಾಕಥಿತ ಶಿಕ್ಷಾವಿದರು ಶಿಕ್ಷಣನೀತಿ ನಿರ್ಧರಿಸುವ ಸಂಸ್ಥೆಗಳಲ್ಲಿ ವ್ಯವಸ್ಥಿತವಾಗಿ ತೂರಿಕೊಂಡು ಮತ್ತಷ್ಟು ಗೋಜಲು ನಿರ್ಮಿಸಿದರು. ಸ್ವದೇಶಿ, ಸ್ವಾಭಿಮಾನಿ, ಮಣ್ಣಿನ ಸಂಸ್ಕೃತಿಯ ಪ್ರತಿಬಿಂಬವಾಗಬೇಕಿದ್ದ ವಿದ್ಯೆ, ಈ ಶಿಕ್ಷಣ ಪಡೆದ ವಿದ್ಯಾರ್ಥಿ, ಇವರೇ ಹಿರಿಯರಾಗಿರುವ ಮನೆಗಳು, ಇಂಥವರಿಂದಲೇ ಕೂಡಿರುವ ಸಮಾಜ ಕ್ರಮೇಣ ವಿದೇಶೀ ಮುಖವಾಗುತ್ತಿರುವುದು ಆತಂಕ ಉಂಟುಮಾಡುತ್ತಿರುವ ಹಂತ ತಲುಪಿದ್ದು ವಿಷಾದನೀಯ.

ಇದೆಲ್ಲಕ್ಕೂ ಪರಿಹಾರವಿಲ್ಲವೇ? ಎಂದು ಚಿಂತಿಸಿದ ಸಜ್ಜನಶಕ್ತಿಯೊಂದು ಮಹರ್ಷಿ ಶಿಕ್ಷಣ ಆಧಾರಿತ ಗುರುಕುಲ ಸ್ಥಾಪನೆಗೆ 24 ವರ್ಷಗಳ ಹಿಂದೆ ಮುಂದಡಿಯಿಟ್ಟಿತು. ಮಕ್ಕಳ ನೈಜ ಸ್ವಭಾವವನ್ನರಿತು ಅದಕ್ಕೆ ಪೂರಕ ವಾತಾವರಣವನ್ನು ನಿರ್ಮಿಸಿ, ಪ್ರತ್ಯಕ್ಷ ಆಚರಣೆಯ ಮೂಲಕ ಕ್ಷಣಕ್ಷಣವೂ ಶಿಕ್ಷಣ ನೀಡಿ ಕೈಹಿಡಿದು ನಡೆಸುವ ಆಚಾರ್ಯ/ಮಾತೃಶ್ರೀ ವ್ಯವಸ್ಥೆ ಕಲ್ಪಿಸಿ, ಸಮಾಜದಲ್ಲಿರುವ ಸಂಪನ್ಮೂಲ ವ್ಯಕ್ತಿಗಳನ್ನು ಜೋಡಿಸಿ, ಕಾಲಕಾಲಕ್ಕೆ ತಜ್ಞಮಂಡಳಿ ಸೇರಿ ಅವಲೋಕನಮಾಡಿ ಹೊಸತನವನ್ನು ನೀಡುತ್ತಾ ಗುರುಕುಲವಿಂದು ದೇಶ–ವಿದೇಶಗಳಲ್ಲಿ ಅನುಕರಣೀಯ ಪ್ರಯೋಗವಾಗಿರುವುದು ಹೆಮ್ಮೆಯ ವಿಷಯ. ಕೃಷಿ, ಯೋಗ, ವೇದ, ವಿಜ್ಞಾನ, ಕಲಾಕೌಶಲ ಎಂಬ 'ಪಂಚಮುಖಿ ಶಿಕ್ಷಣ' ಇಂದು ಕಾಲೋಚಿತವಾಗಿ ಉತ್ತಮ ವ್ಯಕ್ತಿಗಳು ? ಮನೆಗಳು ? ಸಮಾಜವನ್ನು ರೂಪಿಸುವ ಸಫಲ ಹೆಜ್ಜೆಗಳನ್ನಿಡುತ್ತಿದೆ. ಇದಕ್ಕೆ ಉದಾಹರಣೆಗಳು ಹಲವು?

ಮುಂಬೈನಲ್ಲಿ ನೆಲೆಸಿರುವ ಶ್ರೀಮತಿ ಶಾರ್ವರಿ '1999 ರಲ್ಲಿ ಗುರುಕುಲದಲ್ಲಿ ಹತ್ತಾರು ಬಾಲಕಿಯರೊಂದಿಗೆ ಮನೆಮಂದಿಯಿಂದ ದೂರವಿದ್ದು ಏನೋ ಕಳೆದುಕೊಂಡುಬಿಟ್ಟೆ ಎಂದು ಚಿಂತಿಸುತ್ತಿದ್ದ ನನಗೆ ಮೌಲ್ಯಶಿಕ್ಷಣದ ಅರಿವಾಗಿ ಸ್ವಾವಲಂಬಿಯಾಗಿ ಬೆಳೆದೆ. ಅನೇಕ ಭಾಷೆಗಳನ್ನು, ವ್ಯವಹಾರ ಜ್ಞಾನವನ್ನು ಪಡೆದದ್ದು ಇಂದು ಸಫಲ ಜೀವನ ನಡೆಸುತ್ತಿರುವ ಸಮಾಧಾನ ನನಗಿದೆ' ಎನ್ನುತ್ತಾರೆ;

ಚಾಮರಾಜನಗರದ ರೈತ ಕುಟುಂಬದಿಂದ ಬಂದು ವಿದ್ಯಾರ್ಥಿನಿಯಾಗಿ ಗುರುಕುಲ ಸೇರಿ ಮಾತೃಶ್ರೀಯಾಗಿ ರೂಪುಗೊಂಡಿರುವ ಶೃತಿ ಕೆ.ಎಸ್. ಇಂದು ವಿವಿಧ ಪರೀಕ್ಷೆಗಳಲ್ಲಿ ಪಂಡಿತವರ್ಗದ ವಿದ್ವತ್ಪೂರ್ಣ ಸವಾಲುಗಳನ್ನೆಲ್ಲಾ ಆತ್ಮಾಭಿಮಾನದಿಂದ ಸ್ವೀಕರಿಸಿ ಸಫಲರಾದದ್ದು ಸತತ ಪರಿಶ್ರಮಪಟ್ಟಲ್ಲಿ ಏನನ್ನಾದರೂ ಸಾಧಿಸಬಹುದು ಎಂಬುದಕ್ಕೆ ಪ್ರತ್ಯಕ್ಷ ಸಾಕ್ಷಿಯಂತಿದೆ;

ಡಾ. ಅಶ್ವಿನಿ ನಟರಾಜ್ ಎಂಬ ಆಯುರ್ವೇದ ವೈದ್ಯೆ 'ಗುರುಕುಲವಾಸದ ನೆನಪು ಮಾಡಿಕೊಂಡಾಗಲೆಲ್ಲಾ ಭಾವುಕಳಾಗಿಬಿಡುವೆ. ಏಕೆಂದರೆ ಅದು ನನ್ನ ಕನಸುಗಳು ಚಿಗುರೊಡೆಯಲು ವಾತಾವರಣ ನಿರ್ಮಿಸಿದ ಕ್ಷೇತ್ರ ಎನ್ನುತ್ತಾರೆ. ನನ್ನ ನಡೆನುಡಿಯಲ್ಲಿ ಗುರುಕುಲವನ್ನು ಬೇರ್ಪಡಿಸಲಾಗದಷ್ಟು ಸಮರಸಗೊಂಡಿರುವೆ. ಸಾಕಷ್ಟು ಪ್ರಶ್ನಿಸಿ ತರ್ಕಮಾಡಿ ಗುರುಕುಲ ಸೇರಿ ವ್ಯಕ್ತಿತ್ವ ರೂಪಿಸಿಕೊಂಡಿರುವೆ ಎಂಬ ಅಭಿಮಾನ ನನಗಿದೆ' ಎನ್ನುತ್ತಾರೆ.

*ಉಡುಪಿಯ ಖಾಸಗಿ ಶಾಲೆಯೊಂದರಲ್ಲಿ ಪ್ರಾಥಮಿಕ ಶಿಕ್ಷಣ ಪಡೆಯುತ್ತಿರುವಾಗಲೇ ಭರತನಾಟ್ಯ, ಸಂಸ್ಕೃತ ವಿಷಯಗಳಲ್ಲಿ ಆಸಕ್ತಿಹೊಂದಿದ್ದ ಕವಿತಾ, ಪತ್ರಿಕೆಯ ಮೂಲಕ ಮಾಹಿತಿಯರಿತು ಮೈತ್ರೇಯೀ ಗುರುಕುಲ ಸೇರಿದರು. ಅಕ್ಕಂದಿರ ಪ್ರೀತಿ, ಮಾತೃಶ್ರೀಯರ ಮಮತೆ, ತಜ್ಞರ ಮಾರ್ಗದರ್ಶನ ಇವುಗಳಿಂದಾಗಿ ನಾಟ್ಯಕ್ಷೇತ್ರದಲ್ಲಿಂದು ಸಾಧಕಿಯಾಗಿದ್ದಾರೆ.

ಹೀಗೆ, ಮೈತ್ರೇಯೀ ಗುರುಕುಲ ನೈಜಶಿಕ್ಷಣದ ಮೂಲಕ ಉತ್ತಮ ವ್ಯಕ್ತಿಗಳನ್ನು ರೂಪಿಸಲು ಸಾಧ್ಯ ಎಂಬುದಕ್ಕೆ ಉದಾಹರಣೆಯಾಗಿ, ಅನುಕರಣೀಯವಾಗಿ ಶ್ರೇಷ್ಠಭಾರತ ನಿರ್ಮಾಣದ ಹಾದಿಯಲ್ಲಿ 24 ವರ್ಷಗಳ ಹೆಜ್ಜೆಯನ್ನಿಟ್ಟಿದೆ.

ಶಿಕ್ಷಣ ಕ್ಷೇತ್ರಕ್ಕೆ ಇದೊಂದು ಆದರ್ಶ ಪ್ರಯೋಗವಾಗಲಿ ಎಂಬುದೇ ಸದಾಶಯ.

ಗಮನಿಸಿ : ನೀವೂ ನಿಮ್ಮ ಮಕ್ಕಳನ್ನು ಈ ಗುರುಕುಲಕ್ಕೆ ಸೇರಿಸಬಹುದು. ಸಂಪರ್ಕಿಸಲು ದೂ. 08255–265355

–ನ. ನಾಗರಾಜ್

MAG(3)NAP/230/2017-2018 Registered No. RNI 45459/85 RNP/KA/BGS-125/2015-2017 Posted at Bangalore PSO Bangalore -560 026
Date of Publishing : 17-04-2018 Date of Posting 20th or 21st of every month

# ಅಭಿನಂದನೆ


ಶ್ರೀ ಗಂಗಾಧರ್


ಶ್ರೀ ಸಂದೀಪ್ ಬೂದಿಹಾಳ್


ಶ್ರೀಮತಿ ಜಿ. ಎನ್. ವಾಸುಕಿ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘಕ್ಕೆ ಈವರೆಗೆ ಅಧ್ಯಕ್ಷರಾಗಿದ್ದ ಶ್ರೀ ಶಿವಾನಂದಸಿಂಧನಕೇರರವರು ನವೆಂಬರ್ 2017 ರಲ್ಲಿ ಮಧ್ಯಪ್ರದೇಶದ ಅಮರಾವತಿಯಲ್ಲಿ ನಡೆದ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಚುನಾಯಿತರಾದ ನಂತರ ಶ್ರೀ ಸಂದೀಪ್ ಬೂದಿಹಾಳ್, ಪ್ರಾಂಶುಪಾಲರು, ವಿಜಯ ಪದವಿ ಪೂರ್ವ ಕಾಲೇಜು, ಹುಬ್ಬಳ್ಳಿ ಇವರನ್ನು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯಾಧ್ಯಕ್ಷರನ್ನಾಗಿ, ರಾಮನಗರದ ಶಿಕ್ಷಕರಾದ ಶ್ರೀ ಗಂಗಾಧರ್‌ರವರನ್ನು ಸಹ ಪ್ರಧಾನಕಾರ್ಯದರ್ಶಿಗಳಾಗಿ ಹಾಗೂ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಮಹಿಳಾ ಪ್ರಮುಖರಾಗಿದ್ದ ಶ್ರೀಮತಿ ಮಮತಾ ಡಿ.ಕೆ ರವರು ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಮಹಿಳಾಘಟಕದ ಸಹ ಕಾರ್ಯದರ್ಶಿಯಾಗಿ ಚುನಾಯಿತರಾಗಿದ್ದರಿಂದ ಶ್ರೀಮತಿ ವಾಸುಕಿ, ಕನ್ನಡ ಭಾಷಾ ಶಿಕ್ಷಕಿ ಹಾಗೂ ಬೆಂಗಳೂರು ದಕ್ಷಿಣ ವಿಭಾಗದ ಕಾರ್ಯದರ್ಶಿ ಇವರನ್ನು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಮಹಿಳಾ ಪ್ರಮುಖರನ್ನಾಗಿ ದಿನಾಂಕ 30.03.2018ರಂದು ಬೆಂಗಳೂರಿನ ಯಾದವಸ್ಮೃತಿಯಲ್ಲಿ ನಡೆದ ರಾಜ್ಯ ಕಾರ್ಯಕಾರಿಣಿಯಲ್ಲಿ ಸರ್ವಾನುಮತದಿಂದ ಆಯ್ಕೆಮಾಡಲಾಯಿತು. ಹೊಸದಾಗಿ ಆಯ್ಕೆಯಾದ ಎಲ್ಲರಿಗೂ ಅಭಿನಂದನೆಗಳು.

# ಚಿತ್ರ ಸುದ್ದಿ



ಡಾ. ಡಿ. ಷಣ್ಮುಖ ಅಪರ ಆಯುಕ್ತರು ಸಾ. ಶಿ. ಇಲಾಖೆ ಕಲಬುರಗಿ ಇವರನ್ನು ಮಾಧ್ಯಮಿಕ ಶಿಕ್ಷಕ ಸಂಘ ಕಲಬುರಗಿ ಯಾದಗಿರಿ ಘಟಕದ ಪದಾಧಿಕಾರಿಗಳು ಗೌರವಿಸಿ ಸನ್ಮಾನಿಸಿದರು. ಶೈಕ್ಷಣಿಕ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳು ಕುರಿತು ಚರ್ಚೆ ನಡೆಸಿದರು.



ಯುಗಾದಿ ನೂತನ ವರ್ಷದ ಶಿಕ್ಷಕ ಸಂಘದ ಪಂಚಾಂಗ (ಕ್ಯಾಲೆಂಡರ್) ವನ್ನು ದಿನಾಂಕ 04.04.2018 ರಂದು ಸಂಘದ ಕಾರ್ಯಾಲಯದಲ್ಲಿ ಶ್ರೀ ಕೃ. ನರಹರಿಯವರು ಮತ್ತು ವೇದಿಕೆಯ ಮೇಲೆ ಉಪಸ್ಥಿತರಿದ್ದ ಗಣ್ಯರು ಬಿಡುಗಡೆ ಮಾಡಿದರು. 50ಕ್ಕೂ ಹೆಚ್ಚು ಶಿಕ್ಷಕರು ಹಾಗೂ ಸಂಘದ ಕಾರ್ಯಕರ್ತರು ಈ ಸಮಾರಂಭದಲ್ಲಿ ಭಾಗವಹಿಸಿದ್ದರು.

**IF UNDELIVERED PLEASE RETURN TO SENDER**

Printed By :
General Secretary,
Karnataka State Secondary Teachers' Association (R.)
Published By:
General Secretary,
Karnataka State Secondary Teachers' Association (R.)
Owned By :
Karnataka State Secondary Teachers' Association (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka State Secondary Teachers' Association (R.)
# 55, 'Yadavasmurthi', 1st Main, Sheshadripuram, Bengaluru -560 020

Editor : General Secretary, Karnataka State Secondary Teachers' Association(R.), Bengaluru -20

srushtidesigns@gmail.com